MAA ಫ್ರೆಂಡ್ಸ್ ಸಾರಥ್ಯದಲ್ಲಿ...

www.yuvamarga.com Yuva Marga yuva_marga_

# ಯುವ ಮಾರ್ಗ

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಬ್ Cell : 9743497111


YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ Cell : 9743496111

ಸಂಪುಟ: 05 ಸಂಚಿಕೆ: 82 ಬುಧವಾರ : 14–01–2026 ರಾಯಚೂರು RNI NO: KARKAN/2022/90446 ಪುಟ: 4 ಬೆಲೆ: ರೂ: 2–00

VOLUME: 05 ISSUE: 82 WEDNESDAY : 14–01–2026 RAICHUR EMAIL: YUVAMARGA@GMAIL.COM PAGE: 4 PRICE: Rs: 2-00

## ರಾಯಚೂರು ಉತ್ಸವ: ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮತ್ತೊಂದು ಸುತ್ತಿನ ಸಿದ್ಧತಾ ಸಭೆ



ಯುವಮಾರ್ಗ ಸುದ್ದಿ

**ರಾಯಚೂರು ಜ,13–** ಜನವರಿ 29, 30 ಹಾಗೂ 31ರಂದು ನಿಗದಿಯಾದ ರಾಯಚೂರು ಉತ್ಸವ ಆಚರಣಾ ಸಮಿತಿಯ ಅಧ್ಯಕ್ಷರಾದ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರ ಅಧ್ಯಕ್ಷತೆಯಲ್ಲಿ ಜನವರಿ 13ರಂದು ಎಡೆದೊರೆ ನಾಡು ರಾಯಚೂರು ಉತ್ಸವ–2026ರ ಮತ್ತೊಂದು ಸುತ್ತಿನ ಸಿದ್ಧತಾ ಸಭೆ ನಡೆಯಿತು.

ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನಡೆದ ಮೂರನೇ ಸುತ್ತಿನ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾಧಿಕಾರಿಗಳು, ಉತ್ಸವದ ಹಿನ್ನೆಲೆಯಲ್ಲಿ ಈಗಾಗಲೇ ಎಲ್ಲ ರೀತಿಯಲ್ಲಿ ಸಿದ್ದತೆಗಳು ನಡೆಯುತ್ತಿದ್ದು, ಇನ್ನಷ್ಟು ಚುರುಕುಗೊಳ್ಳಬೇಕು. ಮುಖ್ಯವಾಗಿ ಜನೋತ್ಸವ ರೀತಿಯಲ್ಲಿ ಉತ್ಸವ ನಡೆಸಲು ಜಿಲ್ಲಾಡಳಿತವು ಬದ್ಧವಾಗಿದೆ. ನಾವು ಸಹ ಉತ್ಸವದಲ್ಲಿ

ಭಾಗವಹಿಸುತ್ತೇವೆ. ನಮಗೂ ಉತ್ಸವದ ಕಾರ್ಯ ವಹಿಸಿ ಎಂದು ತಿಳಿಸುವ ಜಿಲ್ಲೆಯ ಎಲ್ಲ ಸಂಘ–ಸಂಸ್ಥೆಗಳ, ಗಣ್ಯರ, ನಾಗರಿಕರ, ಯುವಕರ, ನೌಕರರ ಅಭಿಲಾಷೆಯಂತೆ ಎಲ್ಲರ ಸಹಭಾಗಿತ್ವದೊಂದಿಗೆ ಉತ್ಸವ ನಡೆಯುವಂತೆ ಕಾರ್ಯಯೋಜನೆ ರೂಪಿಸಿ ಸಂಬಂಧಿಸಿದ ಆಯಾ ಸಮಿತಿಗಳಲ್ಲಿನ ಅಧ್ಯಕ್ಷರು ಮತ್ತು ಸದಸ್ಯರು ಕಾರ್ಯನುಷ್ಠಾನ ಗೊಳಿಸಬೇಕು ಎಂದು ಸೂಚನೆ ನೀಡಿದರು.

ಜಿಲ್ಲೆಯಲ್ಲಿನ ಕವಿಗಳು, ಲೇಖಕರು, ಚಿಂತಕರು ಮತ್ತು ಬುದ್ಧಿಜೀವಗಳ ಮತ್ತು ಜಾನಪದ ಸೇರಿದಂತೆ ಎಲ್ಲ ಬಗೆಯ ಕಲಾವಿದರಿಗೆ ಉತ್ಸವದಲ್ಲಿ ಅವಕಾಶ ಸಿಗಬೇಕು. (2ನೇ ಪುಟಕ್ಕೆ>>>)

## ಬಜೆಟ್‌ನಲ್ಲಿ ಸಣ್ಣ ಉದ್ಯಮಗಳ ತೆರಿಗೆ, ಸಾಲ ನಿಯಂತ್ರಕ ಪರಿಹಾರ ಕ್ರಮ ಜಾರಿಗೆ ಆಗ್ರಹ

**ಕೋಲ್ಕತ್ತಾ, ಜ. 13–** ಕುಟೀರ ಮತ್ತು ಸಣ್ಣ ಕೈಗಾರಿಕೆಗಳ ಸಂಘಗಳ ಒಕ್ಕೂಟ (ಎಫ್‌ಎಸಿಎಸ್‌ಐ) 2026–27ರ ಕೇಂದ್ರ ಬಜೆಟ್‌ನಲ್ಲಿ ಸೂಕ್ಷ್ಮ ಮತ್ತು ಸಣ್ಣ ಉದ್ಯಮಗಳಿಗೆ ತೆರಿಗೆ, ಸಾಲ ಮತ್ತು ನಿಯಂತ್ರಕ ಪರಿಹಾರ ಕ್ರಮಗಳನ್ನು ಜಾರಿಗೊಳಿಸುವಂತೆ ಕೇಂದ್ರವನ್ನು ಒತ್ತಾಯಿಸಿದೆ.

ದೇಶಾದ್ಯಂತ ಉದ್ಯಮಿಗಳು ಮತ್ತು ಎಂಎಸ್‌ಇ ಗುಂಪುಗಳ ವಿವಿಧ ಸಂಘಗಳೊಂದಿಗೆ ಸಮಾಲೋಚನೆ ನಡೆಸಿದ ನಂತರ ಶಿಫಾರಸುಗಳನ್ನು



ರೂಪಿಸಲಾಗಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್‌ಗೆ ಬರೆದ ಇತ್ತಿಚಿನ ಬಜೆಟ್ ಪೂರ್ವ ಪತ್ರದಲ್ಲಿ, ಎಫ್‌ಎಸಿಎಸ್‌ಐ ಅಧ್ಯಕ್ಷ ಎಚ್ ಕೆ ಗುಹಾ ಹೇಳಿದ್ದಾರೆ.

ಪ್ರಮುಖ ಬೇಡಿಕೆಗಳಲ್ಲಿ, ಎಂಎಸ್‌ಎಂಇ ಸಚಿವಾಲಯದ ಅಡಿಯಲ್ಲಿ ಸಣ್ಣ ಮತ್ತು ಸೂಕ್ಷ್ಮ ಉದ್ಯಮಗಳಿಗೆ ವಿಶೇಷ ಮಂಡಳಿಯನ್ನು ರಚಿಸುವುದು, ಜಿಎಸ್‌ಟಿ ಆಡಳಿತದಲ್ಲಿ ಹೆಚ್ಚಿನ ವಿನಾಯಿತಿ ಮಿತಿ ಮತ್ತು ಸಣ್ಣ ಘಟಕಗಳಿಗೆ ಒಂದೇ, ಸರಳೀಕೃತ ಜಿಎಸ್‌ಟಿ ರಿಟರ್ನ್ ಅನ್ನು ಕೈಗಾರಿಕಾ ಸಂಸ್ಥೆ ಕೋರಿದೆ. (2ನೇ ಪುಟಕ್ಕೆ>>>)

## ವಾರದೊಳಗೆ ಜೋಳ ಖರೀದಿ ಕೇಂದ್ರ ಪ್ರಾರಂಭಿಸದಿದ್ದರೆ ರಸ್ತೆತಡೆ ಚಳುವಳಿ: ಕೆ.ವೈ.ಬಸವರಾಜನಾಯಕ.

ಯುವಮಾರ್ಗ ಸುದ್ದಿ

**ಮಾನ್ವಿ,ಜ.13–**ತಾಲೂಕಿನಲ್ಲಿ ರೈತರು ಬೆಳೆದ ಜೋಳದ ಬೆಳೆಯನ್ನು ಎಂಎಸ್ಪಿ ದರದಲ್ಲಿ ಖರೀದಿ ಮಾಡಲು ವಾರದೊಳಗೆ ನೋಂದಣೆ ಪ್ರಕ್ರಿಯೆ ಮತ್ತು ಜೋಳ ಖರೀದಿ ಕೇಂದ್ರಗಳನ್ನು ಪ್ರಾರಂಭಿಸಬೇಕು ಇಲ್ಲದಿದ್ದರೆ ರೈತರೂಂದಿಗೆ ಬೀದಿಗಿಳಿದು ರಸ್ತೆತಡೆ ಹೋರಾಟ ನಡೆಸಬೇಕಾಗುತ್ತದೆ ಎಂದು ಜಿಲ್ಲಾ, ತಾಲೂಕ ಅಧಿಕಾರಿಗಳಿಗೆ ಕರ್ನಾಟಕ ರಾಜ್ಯ ರೈತಸಂಘದ ಜಿಲ್ಲಾಧ್ಯಕ್ಷ ಕೆ.ವೈ.ಬಸವರಾಜನಾಯಕ ಎಚ್ಚರಿಸಿದ್ದಾರೆ.

ಪಟ್ಟಣದ ಪತ್ರಿಕಾ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಾ ತಾಲೂಕಿನಲ್ಲಿ ಜೋಳ ಕಟಾವು ನಡೆದಿದ್ದು ಇದುವರೆಗೂ ಜೋಳ ಖರೀದಿ ಕೇಂದ್ರ ಮತ್ತು ನೊಂದಣಿ ಕಾರ್ಯ ಆರಂಭಿಸಿಲ್ಲ. ರೈತರು ಜೋಳ ಕಟಾವು ಮಾಡುತ್ತಿದ್ದಾಗ ನೋಂದಣಿ ಕಾರ್ಯ ಪ್ರಾರಂಭಿಸಿದರೆ ರೈತರಿಗೆ ಅನುಕೂಲವಾಗುತ್ತದೆ ಕಳೆದ ವರ್ಷ ಕಟಾವು ಆರಂಭದಲ್ಲೇ ನೋಂದಣಿ ಕಾರ್ಯ ಆರಂಭವಾಗಿತ್ತು. ನೋಂದಣಿ ತಡವಾದಷ್ಟು ರೈತರಿಗೆ ಏಕಾಏಕಿ ನೋಂದಣಿಗೆ ಅನಾನುಕೂಲವಾಗುತ್ತದೆ ವಾರದೊ




ಳಗೆ ಜೋಳ ನೊಂದಣಿ ಮತ್ತು ಖರೀದಿ ಕೇಂದ್ರ ಪ್ರಾರಂಭಿಸಬೇಕು ಎಂದರು. ಕೃಷಿ ಇಲಾಖೆಯಿಂದ ಎಸ್‌ಸಿ ಮತ್ತು ಎಸ್‌ಟಿ ರೈತರಿಗೆ ಶೇ.90 ರಿಯಾಯಿತಿ ದರದಲ್ಲಿ ನೀಡುವ ಕೃಷಿ ಯಂತ್ರೋಪಕರಣಗಳನ್ನು ಸರ್ಕಾರ ಇದು ವರೆಗೂ ಅನುದಾನ ಬಿಡುಗಡೆ ಮಾಡಿಲ್ಲ. ಕೃಷಿ ಇಲಾಖೆಗೆ ಕೇಳಿದರೆ ಅನುದಾನ ಬಂದಿಲ್ಲ ಎನ್ನುತ್ತಿದ್ದಾರೆ ಬಡವರ ಪಕ್ಷ ಎನ್ನುವ ಇವರು ಎಸ್‌ಸಿ ಮತ್ತು ಎಸ್‌ಟಿ ವಿರೋಧಿ ಸರ್ಕಾರ ಎಂದು ಕೆ.ವೈ. ಬಸವರಾಜನಾಯಕ ಆಕ್ರೋಶ ವ್ಯಕ್ತಪಡಿಸಿದರು.

ಸಚಿವರು, ಶಾಸಕರು. ಅಧಿಕಾರಿಗಳು ಕೂಡಲೇ ಜೋಳ ಖರೀದಿ ಕೇಂದ್ರ ಆರಂಭಿಸಿ ನೋಂದಣಿ ಕಾರ್ಯ ಪ್ರಾರಂಭಿಸಬೇಕು, ಕೃಷಿ ಇಲಾಖೆಯಿಂದ ಎಸ್‌ಸಿ ಮತ್ತು ಎಸ್‌ಟಿ ರೈತರಿಗೆ ರಿಯಾಯಿತಿ ದರದಲ್ಲಿ ನೀಡುವ ಕೃಷಿ ಯಂತ್ರೋಪಕರಣಗಳಿಗೆ ಅನುದಾನ ಬಿಡುಗಡೆ ಮಾಡಬೇಕು ಇಲ್ಲದಿದ್ದರೆ ಸರ್ಕಾರದ ಮತ್ತು ಜಿಲ್ಲಾಡಳಿತ ವಿರುದ್ಧ ಉಗ್ರ ಪ್ರತಿಭಟನೆ ಮಾಡಲಾಗುವುದು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ರೈತಸಂಘದ ಜಿಲ್ಲಾ ಉಪಾಧ್ಯಕ್ಷ ಉರುಕುಂದನಾಯಕ, ತಾಲೂಕ ಅಧ್ಯಕ್ಷ ಹೊಳೆಯಪ್ಪ ಉಟಕನೂರು, ತಾಲೂಕ ಉಪಾಧ್ಯಕ್ಷ ಚಂದ್ರು ಜಗ್ಗಿ ಸಂಗಾಪುರು, ರೈತ ಮುಖಂಡರಾದ ಹನುಮಂತ ಉಟಕನೂರು, ಶ್ರೀಧರ ಕೊಟ್ನೆಕಲ್, ಕೊಂಡಯ್ಯನಾಯಕ ಸೇರಿದಂತೆ ಇನ್ನಿತರರಿದ್ದರು.

## ಸಾರ್ವಜನಿಕ ಆಸ್ಪತ್ರೆಗೆ ಹೃದಯ ರೋಗ ತಜ್ಞರ ನೇಮಕಕ್ಕೆ ಆಗ್ರಹಿಸಿ ಅರೆಬೆತ್ತಲೆ ಮೆರವಣಿಗೆ




ಯುವಮಾರ್ಗ ಸುದ್ದಿ

**ಲಿಂಗಸುಗೂರು,ಜ.13–** ಸಾರ್ವಜನಿಕ ಆಸ್ಪತ್ರೆಗೆ ಹೃದಯ ರೋಗ ಹಾಗೂ ಕಿವಿ, ಮೂಗು, ಗಂಟಲು ತಜ್ಞರ ನೇಮಕ ಮಾಡಲು ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆ ಕಾರ್ಯಕರ್ತರು ಅರೆ ಬೆತ್ತಲೆ ಮೆರವಣಿಗೆ ನಡೆಸಿದರು.

ಇತ್ತೀಚಿನ ದಿನಗಳಲ್ಲಿ ಹೃದಯ ಸಂಬಂಧಿತ ರೋಗಗಳು ಹೆಚ್ಚಾಗುತ್ತಿದ್ದು , ತಕ್ಷಣದ ಹಾಗೂ ಪರಿಣಿತ ಚಿಕಿತ್ಸೆ ಅಗತ್ಯವಾಗಿದೆ . ಆದರೆ , ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಹೃದಯ ರೋಗ ತಜ್ಞರ ( ಕಾರ್ಡಿಯಾಲಜಿಸ್ಟ್ ) ಕೊರತೆ ಇರುವುದರಿಂದ , ಹೃದಯ ಸಮಸ್ಯೆಗಳಿಂದ ಬಳಲುವ ರೋಗಿಗಳು ಖಾಸಗಿ ಆಸ್ಪತ್ರೆಗಳತ್ತ ಹೋಗಬೇಕಾಗಿದ್ದು , ಇದರಿಂದ ಭಾರೀ , ಆರ್ಥಿಕ ಹೊರೆ ಎದುರಿಸುತ್ತಿದ್ದಾರೆ . ತುರ್ತು ಸಂದರ್ಭದಲ್ಲಿ ತಕ್ಷಣ ಚಿಕಿತ್ಸೆ ಸಿಗದೆ ಜೀವಾಪಾಯ ಉಂಟಾಗುವ ಘಟನೆಗಳೂ ನಡೆಯುತ್ತಿವೆ . ಬಡ ಮತ್ತು ಸಾಮಾನ್ಯ ಜನರ ಹಿತದೃಷ್ಟಿಯಿಂದ , ಸಾರ್ವಜನಿಕ ಆಸ್ಪತ್ರೆಯಲ್ಲಿ ಶಾಶ್ವತವಾಗಿ ಹೃದಯ ರೋಗ ತಜ್ಞರನ್ನು ನೇಮಕ ಮಾಡುವುದು ಅತ್ಯಂತ ಅಗತ್ಯವಾಗಿದೆ . ಇದರಿಂದ ಸಮಯಕ್ಕೆ ಸರಿಯಾದ ಚಿಕಿತ್ಸೆ ದೊರೆಯುವುದರೊಂದಿಗೆ ಅನಾವಶ್ಯಕ ಸಾವುಗಳನ್ನು ತಡೆಗಟ್ಟಲು ಸಹಕಾರಿಯಾಗುತ್ತದೆ , ಅಲ್ಲದೇ ಕಿವಿ , ಮೂಗು , ಗಂಟಲು ತಜ್ಞರು ಇಲ್ಲದೇ ರೋಗಿಗಳು ಪರದಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ . ಆದ್ದರಿಂದ , ಜನಹಿತದ ದೃಷ್ಟಿಯಿಂದ ತಕ್ಷಣವೇ ಸಾರ್ವಜನಿಕ ಆಸ್ಪತ್ರೆಗೆ ಅನುಭವಿ ಹೃದಯ ರೋಗ ತಜ್ಞರನ್ನು ಹಾಗೂ ಕಿವಿ , ಮೂಗು , ಗಂಟಲು ತಜ್ಞರನ್ನು ನೇಮಕ ಮಾಡುವಂತೆ ಹಾಗೂ " ಯಕೋ " ಯಂತ್ರದ ಜೊತೆಗೆ ಅಗತ್ಯವಾದ ಉಪಕರಣಗಳು ಮತ್ತು ಸೌಲಭ್ಯಗಳನ್ನು ಒದಗಿಸುವಂತೆ ಒತ್ತಾಯಿಸಿದ ಮನವಿ ಪತ್ರವನ್ನು ತಾಲೂಕು ಆರೋಗ್ಯ ಅಧಿಕಾರಿ ಮುಖಾಂತರ ಆರೋಗ್ಯ ಸಚಿವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಂಘಟನೆ ಅಧ್ಯಕ್ಷ ಜಿಲಾನಿ ಪಾಷ, ರವಿ ಕುಮಾರ ಬರಗುಡಿ, ಅಜೀಜ್ ಪಾಷಾ, ಮೋಹಿನ್ ಖಾನ್, ಮರೆಪ್ಪ, ಪ್ರಭುಗೌಡ ಸೇರಿ ಇತರರು ಇದ್ದರು

## ತೊಗರಿ ಖರೀದಿ ಕೇಂದ್ರ ಉದ್ಘಾಟನೆ

ಯುವಮಾರ್ಗ ಸುದ್ದಿ

**ಲಿಂಗಸುಗೂರು,ಜ.13–** ಪಟ್ಟಣದ ಎಪಿಎಂಸಿ ಪ್ರಾಂಗಣದಲ್ಲಿ ಶಾಸಕ ಮಾನಪ್ಪ ವಜ್ಜಲ್ ತೊಗರಿ ಖರೀದಿ ಕೇಂದ್ರವನ್ನು ಮಂಗಳವಾರ ಉದ್ಘಾಟಿಸಿದರು.

ಕೇಂದ್ರ ಸರಕಾರದ ಬೆಂಬಲ ಯೋಜನೆಯಡಿ ನಾಫೆಡ್ ಸಂಸ್ಥೆಯ 2025–26ನೇ ಸಾಲಿನ ಎಫ್.ಎ.ಕ್ಯೂ. ಗುಣಮಟ್ಟದ ತೊಗರಿ ಕೇಂದ್ರ ಇಂದಿನಿಂದ ಕಾರ್ಯಾರಂಭ ಮಾಡಿದ್ದು, ತಾಲೂಕಿನ ರೈತರು ನಿಯಮಾನುಸಾರ ಶಾಂತಯುತವಾಗಿ ತಮ್ಮ ಬೆಳೆಯನ್ನು ಇಲ್ಲಿ ಮಾರಾಟ ಮಾಡಬಹುದು. ಅಧಿಕಾರಿಗಳು ರೈತರೊಂದಿಗೆ ಅನುಚಿತವಾಗಿ ವರ್ತಿಸದೇ ಗ್ರಾಮೀಣ ಪ್ರದೇಶದಿಂದ ಬರುವ ರೈತರ ಮಾಲನ್ನು ಸಕಾಲದಲ್ಲಿ ತೆಗೆದುಕೊಳ್ಳಬೇಕು. ಎಂದು ಶಾಸಕ ವಜ್ಜಲ್ ಸೂಚನೆ ನೀಡಿದರು.

ಈ ಸಂದರ್ಭದಲ್ಲಿಎಪಿಎಂಸಿ ಅಧ್ಯಕ್ಷ ಅಮರೇಶ ಹೆಸರೂರು, ಬಿಜೆಪಿ ಮಂಡಲ ಅಧ್ಯಕ್ಷರಾದ ದುಲ್ಲೇಶ ಸಾದುಕಾರ ಮುದಗಲ್, ಮುಖಂಡರಾದ ಗಿರಿಮಲ್ಲನಗೌಡ, ಮಹಾದೇವಯ್ಯ ಸ್ವಾಮಿ, ಅಯ್ಯಪ್ಪ ಮಾಳೂರು, ಭೀಮಣ್ಣ ಹಿರೇಮನಿ ಸೇರಿ ಇತರರು ಇದ್ದರು



## ವಸತಿ ವಿನ್ಯಾಸ ಪ್ರದೇಶದಲ್ಲಿ ಒಳ ಸಂಪರ್ಕ ರಸ್ತೆ ನಿರ್ಮಾಣಕ್ಕಾಗಿ ಮನವಿ



ಯುವಮಾರ್ಗ ಸುದ್ದಿ

**ಮಾನ್ವಿ,ಜ.13–** ಪಟ್ಟಣದ ಪುರಸಭೆ ಆವರಣದಲ್ಲಿ ಕನ್ನಡ ಸೇನೆ ಕರ್ನಾಟಕ ತಾ,ಘಟಕ ವತಿಯಿಂದ ಪುರಸಭೆ ಮುಖ್ಯಾಧಿಕಾರಿಗಳಿಗೆ ಆರೋಗ್ಯ ನಿರೀಕ್ಷಕರಾದ ಮಹೇಶ್ ಕುಮಾರ ರವರ ಮೂಲಕ ಮನವಿ ಸಲ್ಲಿಸಿ ತಾ.ಅಧ್ಯಕ್ಷರಾದ ಬಸವರಾಜ ಮೈಲಾರಿ ಮಾತನಾಡಿ ಮಾನ್ವಿ ಪಟ್ಟಣದ ವಾರ್ಡ್ ನಂ.2 ರಲ್ಲಿ ಬರುವ ನೇತಾಜಿ ಶಾಲೆಯ ಹಿಂದುಗಡೆ ನೂತನವಾಗಿ ರಚಿಸಲಾಗಿರುವ ವಸತಿ ವಿನ್ಯಾಸ ಪ್ರದೇಶದಲ್ಲಿ ಜನರ ಸಂಚಾರಕ್ಕೆ ಅಗತ್ಯವಾಗಿರುವ ಲಿಂಕ್ ರಸ್ತೆಗಳು ಇಲ್ಲದೆ ಇರುವುದರಿಂದ ಇಲ್ಲಿನ ನಿವಾಸಿಗಳು ಮುಖ್ಯ ರಸ್ತೆಗೆ ಸಾಗುವುದಕ್ಕೆ ಸುತ್ತಿಬಳಸಿ ಕೊಂಡು ಹೋಗಾಬೇಕಾಗಿರುವುದರಿಂದ ಇಲ್ಲಿನ ನಿವಾಸಿಗಳಿಗೆ ತೀವ್ರ ತೊಂದರೆಯಾಗುತ್ತಿದೆ ರಸ್ತೆಗಳನ್ನು ಹಾಕಬೇಕಾದ ಸ್ಥಳದಲ್ಲಿ ಉದ್ಯಾನವನ್ನು ನಿರ್ಮಾಣ ಮಾಡಲಾಗುತ್ತಿದೆ ಕೂಡಲೇ ಪುರಸಭೆ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಇಲ್ಲಿನ ನಿವಾಸಿಗಳಿಗೆ ಒಳ ರಸ್ತೆಗಳನ್ನು ಮಾಡಿಕೊಡುವುದಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.ತಾ.ಪ್ರ. ಕಾರ್ಯದರ್ಶಿ ಶಿವಾನಂದ ನಾಯಕ , ನ.ಘಟಕದ ಅಧ್ಯಕ್ಷರಾದ ಶೇಖ್ ಮುಸ್ತಫ, ಶರಣಬಸವ, ಭೀಮೇಶ, ಶಿವು ಬಾಲನಗರ, ಪ್ರಭು,ಸಿದ್ದಪ್ಪನಾಯಕ, ಸೇರಿದಂತೆ ಇನ್ನಿತರರು ಇದ್ದರು.

## ಜನವರಿ 19ರಂದು ಜಿಲ್ಲಾಡಳಿತದಿಂದ ಮಹಾಯೋಗಿ ವೇಮನ ಜಯಂತಿ

ಯುವಮಾರ್ಗ ಸುದ್ದಿ

**ರಾಯಚೂರು ಜ,13–**ಇಲ್ಲಿನ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಮಹಾಯೋಗಿ ವೇಮನ ಜಯಂತಿ ಕಾರ್ಯಕ್ರಮವು ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಜನವರಿ 19ರ ಬೆಳಿಗ್ಗೆ 11ಕ್ಕೆ ಹಮ್ಮಿಕೊಳ್ಳಲಾಗಿದೆ.

ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ಉದ್ಘಾಟನೆ ನೆರವೇರಿಸುವರು.

ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಅವರು ಘನ ಉಪಸ್ಥಿತಿ ವಹಿಸುವರು.

ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ್ ಅವರು ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರು ಆಗಿರುವ ಮಸ್ಕಿ ಕ್ಷೇತ್ರದ ಶಾಸಕರಾದ ಆರ್.ಬಸನಗೌಡ ತುರ್ವಿಹಾಳ, ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ, ಹಟ್ಟಿ ಚಿನ್ನದ ಗಣಿ ನಿಯಮಿತದ ಅಧ್ಯಕ್ಷರು ಆಗಿರುವ ಬೀಳಗಿ ಕ್ಷೇತ್ರದ ಶಾಸಕರಾದ ಜೆ.ಟಿ.ಪಾಟೀಲ್, ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ, ಕೊಪ್ಪಳ ಲೋಕಸಭಾ ಸಂಸದರಾದ ಕೆ.ರಾಜಶೇಖರ ಹಿಟ್ನಾಳ, ವಿಧಾನ ಪರಿಷತ್ ಶಾಸಕರಾದ ಶಶೀಲ್ ಜಿ.ನಮೋಷಿ, ಮಾನವಿ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯ ನಾಯಕ, ಲಿಂಗಸಗೂರು ಕ್ಷೇತ್ರದ ಶಾಸಕರಾದ ಮಾನಪ್ಪ ಡಿ.ವಜ್ಜಲ್, ವಿಧಾನ ಪರಿಷತ್ ಶಾಸಕರಾದ ಚಂದ್ರಶೇಖರ್ ಬಿ.ಪಾಟೀಲ್, ದೇವದುರ್ಗ ಕ್ಷೇತ್ರದ ಶಾಸಕರಾದ ಕರೆಮ್ಮ ಜಿ.ನಾಯಕ, ವಿಧಾನ ಪರಿಷತ್ ಶಾಸಕರಾದ ಶರಣಗೌಡ ಪಾಟೀಲ ಬಯ್ಯಾಪುರ, ಎ.ವಸಂತಕುಮಾರ, ಬಸನಗೌಡ ಬಾದರ್ಲಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಗೌಡ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ರಾಜಶೇಖರ ರಾಮಸ್ವಾಮಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪಾಮಯ್ಯ ಮುರಾರಿ, ರಾಯಚೂರು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪವನ್ ಕಿಶೋರ್ ಪಾಟೀಲ್, ಆರ್ಥಿಕ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ರಿತೇಶಕುಮಾರ ಸಿಂಗ್, ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಜಹೀರಾ ನಸೀಮ್, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಶು ಗಿರಿ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಬಾಗಿಯಾಗಲಿದ್ದಾರೆ.

ಕಲಬುರಗಿಯ ಕನ್ನಡ ಸಾಹಿತ್ಯ ಪರಿಷತ್ತು ಮಾಜಿ ಜಿಲ್ಲಾಧ್ಯಕ್ಷರಾದ ಮಹಿಪಾಲರೆಡ್ಡಿ ಅವರು ಮಹಾಯೋಗಿ ವೇಮನ ಜಯಂತಿ ಕುರಿತು ಉಪನ್ಯಾಸ ನೀಡಲಿದ್ದಾರೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಉತ್ತರಾದೇವಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮೊದಲನೇಯ ಪುಟದಿಂದ

# ರಾಯಚೂರು ಉತ್ಸವ: ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮತ್ತೊಂದು ಸುತ್ತಿನ ಸಿದ್ಧತಾ ಸಭೆ

ಈ ಕಾರ್ಯವನ್ನು ಆಯಾ ಸಮಿತಿಯ ಸದಸ್ಯರು ಪಾರದರ್ಶಕವಾಗಿ ಮಾಡಬೇಕು. ಪುಸ್ತಕ ಓದುವ ಸಂಸ್ಕೃತಿಗೆ ಆದ್ಯತೆ ಸಿಗುವ ದಿಶೆಯಲ್ಲಿ ಪುಸ್ತಕ ಪ್ರದರ್ಶನ ಮಳಿಗೆ ನಿರ್ಮಾಣ ಸೇರಿದಂತೆ ನಾನಾ ಬಗೆಯ ಕಾರ್ಯಗಳ ಮೂಲಕ ಉತ್ಸವವು ಅಚ್ಚುಕಟ್ಟಾಗಿ ನಡೆಯುವಂತೆ ನೋಡಿಕೊಳ್ಳಲು ಸೂಚನೆ ನೀಡಿದರು.

ಎಲ್ಲ ಅತಿಥಿ ಗಣ್ಯರಿಗೆ ಶಿಷ್ಟಾಚಾರದಂತೆ ಉತ್ಸವಕ್ಕೆ ಆಹ್ವಾನಿಸುವ ಕಾರ್ಯವಾಗಬೇಕು. ನಗರದ ರೈಲ್ವೆ ನಿಲ್ದಾಣ, ಜಿಲ್ಲೆಯ ಎಲ್ಲ ಬಸ್ ನಿಲ್ದಾಣಗಲ್ಲಿ ಮತ್ತು ಇತರೇ ಸ್ಥಳಗಳಲ್ಲಿ ಪೋಸ್ಟರ್ ಮತ್ತು ಬ್ಯಾನರ್ ಅಳವಡಿಸಿ ಪ್ರಚಾರ ಕಾರ್ಯಕ್ಕೆ ಒತ್ತು ಕೊಡಬೇಕು. ಹೊರಗಡೆಯಿಂದ ಉತ್ಸವಕ್ಕೆ ಆಗಮಿಸುವ ಕಲಾವಿದರು ಮತ್ತು ಇನ್ನಿತರರಿಗೆ ಸರಿಯಾದ ರೀತಿಯಲ್ಲಿ ವಸತಿ ಗೃಹಗಳ ವ್ಯವಸ್ಥೆ ಮಾಡಬೇಕು ಎಂದು ಸೂಚನೆ ನೀಡಿದರು.

ಉತ್ಸವದಲ್ಲಿ ಕೃಷಿ, ಕರಕುಶಲ, ಫಲಪುಷ್ಪ, ಆಹಾರ ಮೇಳ, ಮತ್ಸ್ಯ ಮೇಳ, ಚಿತ್ರಕಲೆ ಪ್ರದರ್ಶನ ಹಮ್ಮಿಕೊಳ್ಳಲಾಗಿದ್ದು, ಎಲ್ಲಾ ಪ್ರದರ್ಶನಗಳು ಅಚ್ಚುಕಟ್ಟಾಗಿ ನಡೆಯಬೇಕು. ರೈತರನ್ನು ಆಕರ್ಷಿಸುವ ಕೃಷಿ ಉತ್ಸವ ಆಯೋಜಿಸಬೇಕು ಎಂದು ಸೂಚನೆ ನೀಡಿದರು.

ರಾಯಚೂರು ಉತ್ಸವದಲ್ಲಿ ನಾನಾ ಸ್ಥಳಗಳ ಮಾಹಿತಿ ಜನತೆಗೆ ಸಿಗುವ ನಿಟ್ಟಿನಲ್ಲಿ ಅಲ್ಲಲ್ಲಿ ಸೂಚನಾ ಫಲಕಗಳನ್ನು ಹಾಕಬೇಕು. ಎನ್.ಸಿ.ಸಿ. ಮತ್ತು ಎನ್.ಎಸ್.ಎಸ್ ಹಾಗೂ ಇತರೆ ಸ್ವಯಂ ಸೇವಕ ಸಂಘಗಳ ಸಹಾಯ-ಸಹಕಾರ ಪಡೆಯಬೇಕು ಎಂದು ತಿಳಿಸಿದರು.

ಈ ವೇಳೆ ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ಮಾತನಾಡಿ, ರಾಯಚೂರು ಉತ್ಸವ ಹಿನ್ನೆಲೆಯಲ್ಲಿ ಈಗಾಗಲೇ ರಾಯಚೂರು ಸಿಟಿಯ ಸೌಂದರ್ಯೀಕರಣ ಕಾರ್ಯ ಭರ್ಜರಿ ನಡೆದಿದೆ. ರಸ್ತೆ ಅಗಲೀಕರಣ, ದುರಸ್ಥಿ ಕಾರ್ಯ ನಡೆದಿದ್ದು ಜನತೆ ಸಹಕಾರ ನೀಡಬೇಕು. ನಗರದ ಎಲ್ಲ ಮುಖ್ಯರಸ್ತೆಗಳು ಸುಂದರವಾಗಿ ಕಾಣುವಂತೆ ಪಾಲಿಕೆ ಕೈಗೊಂಡ ಕಾರ್ಯಕ್ಕೆ ಜನತೆ ಸಹಕರಿಸಬೇಕು. ಕಸವನ್ನು ಎಲ್ಲೆಂದರಲ್ಲಿ ಎಸೆಯಬಾರದು. ರಾಯಚೂರು ಸಿಟಿ ಸೇರಿದಂತೆ ಜಿಲ್ಲೆಯ ಎಲ್ಲ ವ್ಯಾಪಾರಸ್ಥರು ಈಗಿನಿಂದಲೇ ರಾಯಚೂರು ಉತ್ಸವದ ಅಲಂಕಾರ ಕಾರ್ಯಕ್ಕೆ ಕಾರ್ಯಯೋಜನೆ ರೂಪಿಸಿ ಸಹಕರಿಸಬೇಕು ಎಂದು ಎಲ್ಲ ವ್ಯಾಪಾರಸ್ಥರಲ್ಲಿ ಮನವಿ ಮಾಡಿದರು.

ಇದೇ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ, ರಾಯಚೂರು ಸಹಾಯಕ ಆಯುಕ್ತರಾದ ಡಾ.ಹಂಪಣ್ಣ ಸಜ್ಜನ್, ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಡಾ.ಟಿ.ರೋಣಿ, ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕರಾದ ಶರಣಬಸವರಾಜ್, ತಹಸೀಲ್ದಾರರಾದ ಸುರೇಶ್ ವರ್ಮ, ಅಮರೇಶ ಬಿರಾದಾರ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿ ಹಾಗೂ ಸಿಬ್ಬಂದಿ ಸಭೆಯಲ್ಲಿ ಇದ್ದರು.

# ಬಜೆಟ್‌ನಲ್ಲಿ ಸಣ್ಣ ಉದ್ಯಮಗಳ ತೆರಿಗೆ, ಸಾಲ ನಿಯಂತ್ರಕ ಪರಿಹಾರ ಕ್ರಮ ಜಾರಿಗೆ ಆಗ್ರಹ

ಎಫ್‌ಎಸಿಎಸ್‌ಐ 6-7 ಪ್ರತಿಶತದಷ್ಟು ಬಡ್ಡಿ ಮಿತಿಯಲ್ಲಿ ಎಂಎಸ್‌ಇಗಳಿಗೆ 1 ಕೋಟಿ ರೂ.ಗಳವರೆಗೆ ಶಾಸನಬದ್ಧ ಮೇಲಾಧಾರ-ಮುಕ್ತ ಸಾಲವನ್ನು ನೀಡುವುದು, ಜೊತೆಗೆ ಆರ್ಥಿಕ ಒತ್ತಡದ ಅವಧಿಯಲ್ಲಿ ಬಡ್ಡಿ ಸಬ್ವೆನ್ಷನ್ ಮತ್ತು ಬ್ಯಾಂಕಿಂಗ್ ಮಾನದಂಡಗಳನ್ನು ಅನುಸರಿಸುವ ಘಟಕಗಳಿಗೆ ಕಾರ್ಯನಿರತ ಬಂಡವಾಳ ಮಿತಿಗಳನ್ನು ಸ್ವಯಂಚಾಲಿತವಾಗಿ ನವೀಕರಿಸುವುದು ಸಹ ಕೋರಿದೆ.ದ್ರವ್ಯತೆ ಕಾಳಜಿಯನ್ನು ಎತ್ತಿ ತೋರಿಸುತ್ತಾ, ಒಕ್ಕೂಟವು 15 ದಿನಗಳಲ್ಲಿ ಮರುಪಾವತಿಯನ್ನು ಒತ್ತಾಯಿಸಿತು, ಸರ್ಕಾರದಿಂದ ವಿಳಂಬಕ್ಕೆ ಶಾಸನಬದ್ಧ ಬಡ್ಡಿಯೊಂದಿಗೆ, ಮತ್ತು ರಿಟರ್ನ್ ಕಾರ್ಮಿಕ ಮತ್ತು ಸ್ಥಳೀಯ ಕಾನೂನುಗಳಿಗೆ ಸಂಬಂಧಿಸಿದ ಕಾರ್ಯವಿಧಾನದ ಲೋಪಗಳನ್ನು ಸಂಪೂರ್ಣವಾಗಿ ಅಪರಾಧಮುಕ್ತಗೊಳಿಸಿತು.

ರಫ್ತು-ಆಧಾರಿತ ಘಟಕಗಳಿಗೆ, ಮತ್ತು ಸಾರ್ವಜನಿಕ ವಲಯದ ಬ್ಯಾಂಕುಗಳಿಂದ ಗಳಿಗೆ ಸಾಲ ನೀಡುವ ಗುರಿಗಳನ್ನು ಹೆಚ್ಚಿಸುವುದರ ಜೊತೆಗೆ, ಹಠಾತ್ ಸುಂಕ ಹೆಚ್ಚಳದಿಂದ ಪ್ರಭಾವಿತರಾದ ಸಣ್ಣ ರಫ್ತುದಾರರಿಗೆ ಪರಿಹಾರ ನೀಡಲು ರಫ್ತು ಅಪಾಯ ಸಮೀಕರಣ ನಿಧಿಯನ್ನು ರಚಿಸುವ ಪ್ರಸ್ತಾಪವನ್ನು ಮುಂದಿಟ್ಟಿತು.

ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸುವ ಎಂಎಸ್‌ಎಂಇಗಳಿಗೆ ಶುಲ್ಕವನ್ನು ಕಡಿಮೆ ಮಾಡುವುದು ಮತ್ತು ವಿಳಂಬಿತ ಪಾವತಿಗಳ ಪ್ರಕರಣಗಳನ್ನು ತ್ವರಿತಗೊಳಿಸಲು ರಾಜ್ಯ ಸೌಲಭ್ಯ ಮಂಡಳಿಗಳ ಬಲವಾದ ಕಾರ್ಯನಿರ್ವಹಣೆಯನ್ನು ಸಹ ಪತ್ರವು ಕೋರಿತು, ಕೆಲವು ಸಮಸ್ಯೆಗಳಿಗೆ ಕಾಯ್ದೆ, 2006 ಗೆ ತಿದ್ದುಪಡಿಗಳು ಬೇಕಾಗುತ್ತವೆ ಎಂದು ಗಮನಿಸಿದರು.

ನವೀಕರಿಸಬಹುದಾದ ಇಂಧನ ಸ್ಥಾಪನೆಗಳು, ವಿದ್ಯುತ್ ಶುಲ್ಕಗಳು ಮತ್ತು ಸ್ಥಳೀಯ ಸುಂಕಗಳ ಮೇಲೆ ಸಬ್ಸಿಡಿಗಳನ್ನು ವಿಸ್ತರಿಸಲು ಮತ್ತು ರಾಜ್ಯ ಅಭಿವೃದ್ಧಿ ನಿಗಮಗಳು ನಡೆಸುವ ಕೈಗಾರಿಕಾ ಎಸ್ಟೇಟ್‌ಗಳಲ್ಲಿರುವ ಘಟಕಗಳಿಗೆ ವಿಶೇಷ ಸೌಲಭ್ಯಗಳನ್ನು ಒದಗಿಸಲು ರಾಜ್ಯ ಸರ್ಕಾರಗಳೊಂದಿಗೆ ನಿಕಟ ಸಮನ್ವಯದ ಅಗತ್ಯವನ್ನು ಒತ್ತಿಹೇಳಿತು.ಈ ಕ್ರಮಗಳು ಭಾರತದಲ್ಲಿ ಗಳ ಬೆಳವಣಿಗೆಗೆ ಗಮನಾರ್ಹವಾದ ಸಹಾಯಕವಾಗುತ್ತವೆ ಎಂದು ಗುಹಾ ಹೇಳಿದರು.

# ನಾಯಿ ಕಚ್ಚಿದರೆ ದಂಡ: ಸುಪ್ರೀಂ

**ನವದೆಹಲಿ, ಜ.13–** ಬೀದಿ ನಾಯಿಗಳಿಂದ ಕಚ್ಚಿ ಜನರು ಸಾವನ್ನಪ್ಪಿದರೆ ಪ್ರತಿಯೊಂದು ಸಾವಿಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು ಹೊಣೆಗಾರರನ್ನಾಗಿ ಮಾಡಿ ಭಾರಿ ಪ್ರಮಾಣದದಲ್ಲಿ ದಂಡ ಹಾಕಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿರುವ ಸುಪ್ರೀಂಕೋರ್ಟ್, ನಾಯಿಗಳಿಗೆ ಆಹಾರ ನೀಡುವವರನ್ನು ದಾಳಿಗೆ ಹೊಣೆಗಾರರನ್ನಾಗಿ ಮಾಡಬೇಕಾಗುತ್ತದೆ ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದೆ.



ಬೀದಿ ನಾಯಿಗಳ ಪ್ರಕರಣದ ವಿಚಾರಣೆ ಕುರಿತು ಇದು ವಿಚಾರಣೆ ನಡೆಸಿದ , ಕಚ್ಚಿ ಸಾವನ್ನಪ್ಪುವ ಪ್ರತೀ ಸಾವಿಗೂ ರಾಜ್ಯಗಳು ಮತ್ತು ಕೇಂದ್ರ ಸರ್ಕಾರಕ್ಕೆ ಭಾರಿ ಪ್ರಮಾಣದಲ್ಲಿ ದಂಡ ಕಟ್ಟಬೇಕಾಗುತ್ತದೆ ನಾಯಿಯ ಕಡಿತ ಜೀವಿತಾವಧಿಯ ಪರಿಣಾಮ ಬೀರುತ್ತದೆ ಎಂದು ಪೀಠ ಹೇಳಿದೆ.ನಾಯಿ ಕಡಿತ ಪ್ರಕರಣದ ವಿಚಾರಣೆ ಕೈಗೆತ್ತಿಕೊಂಡ ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್, ಸಂದೀಪ್ ಮೆಹ್ತಾ ಮತ್ತು ಎನ್‌ವಿ ಅಂಜಾರಿಯಾ ಅವರನ್ನೊಳಗೊಂಡ ಪೀಠ ಹೇಳಿದೆ.

ಪ್ರತಿ ನಾಯಿ ನಿಯಂತ್ರಿಸಲು ಕಡಿತಕ್ಕೆ, ಪ್ರತಿ ಸಾವಿಗೆ, ಅಗತ್ಯ ವ್ಯವಸ್ಥೆಗಳನ್ನು ಮಾಡದ ರಾಜ್ಯಗಳಿಗೆ ಮತ್ತು ನಾಯಿಗಳಿಗೆ ಆಹಾರ ನೀಡುವವರಿಗೂ ಹೊಣೆಗಾರರನ್ನಾಗಿ ಮಾಡಬೇಕು,ನಾಯಿ ಬಗ್ಗೆ ಪ್ರೀತಿ ಇದ್ದರೆ ಅವುಗಳನ್ನು ನಿಮ್ಮ ಮನೆಗೆ ಕರೆದೊಯ್ಯಿರಿ, ಅಲ್ಲಿ ಇಟ್ಟುಕೊಳ್ಳಿ. ಅವುಗಳನ್ನು ಏಕೆ ಸುತ್ತಾಡಲು, ಕಚ್ಚಲು, ಬೆನ್ನಟ್ಟಲು ಬಿಡಬೇಕು ಎಂದು ನಾಯಿ ಕಡಿತದ ಪರಿಣಾಮ ಜೀವಿತಾವಧಿಯವರೆಗೆ ಇರುತ್ತದೆ" ಎಂದು ನ್ಯಾಯಪೀಠ ಸರ್ಕಾರಗಳಿಗೆ ಚಾಟಿ ಬೀಸಿದೆ.

ಬೀದಿ ನಾಯಿ ಹಾವಳಿ ಮತ್ತು ಕಡಿತ ಪ್ರಕರಣಕ್ಕೆ ಸಂಬಂದಿಸಿದಂತೆ ಎಲ್ಲಾ ರಾಜ್ಯ ಸರ್ಕಾರಗಳನ್ನು ತರಾಟೆಗೆ ತೆಗೆದುಕೊಂಡ ಸುಪ್ರೀಂ ಕೋರ್ಟ್, ಎಬಿಸಿ ನಿಯಮಗಳನ್ನು ಜಾರಿಗೆ ತರುವಲ್ಲಿ ರಾಜ್ಯಗಳು ವಿಫಲವಾಗಿದೆ" ಎಂದು ಹೇಳಿದೆ
ಬೀದಿ ನಾಯಿ ಹಾವಳಿ ನಿಯಂತ್ರಣ ಮಾಡಲು ವಿಫಲವಾಗುವ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳನ್ನು ತರಾಟೆಗೆ ತೆಗೆದುಕೊಂಡಿದ್ದು ಈ ವಿಷಯವು ಶಾಶ್ವತವಾಗಿ ಮುಂದುವರೆದಿದೆ. 1950 ರ ದಶಕದಿಂದಲೂ ಸಂಸತ್ತು ಇದನ್ನು ಪರಿಶೀಲಿಸುತ್ತಿದೆ ಎಂದು ನೀವೇ ಹೇಳಿದ್ದೀರಿ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದಾಗಿ ಈ ಸಮಸ್ಯೆ 1000 ಪಟ್ಟು ಹೆಚ್ಚಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕಡೆಯಿಂದ ಸಂಪೂರ್ಣ ವೈಫಲ್ಯ ಎಂದು ನ್ಯಾಯಪೀಠ ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು ತರಾಟೆಗೆ ತೆಗೆದುಕೊಂಡಿದೆ.

ನಾಯಿ ಕಡಿತದಿಂದ ಪ್ರಾಣ ಕಳೆದುಕೊಂಡ ಪ್ರತಿಯೊಬ್ಬ ಪುರುಷ, ಮಹಿಳೆ ಮತ್ತು ಮಗುವಿಗೆ ಹೊಣೆಗಾರರಾದ ಸರ್ಕಾರಕ್ಕೆ ಭಾರಿ ದಂಡ ವಿಧಿಸುತ್ತೇವೆ" ಎಂದು ಪೀಠ ತಿಳಿಸಿದೆ.

ಕಳೆದ ವಾರ ಮೂರು ಬಾರಿ ತೀವ್ರ ಚರ್ಚೆಯ ನಂತರ, ವಿವಾದಾತ್ಮಕ ವಿಷಯದ ವಿಚಾರಣೆ ಈ ವಾರ ಪುನರಾರಂಭವಾಯಿತು. ಎಲ್ಲಾ ಬೀದಿ ನಾಯಿಗಳನ್ನು ನಿಯಂತ್ರಿಸಬೇಕು ಎಂದು ಅವರು ಹೇಳುತ್ತಿಲ್ಲ ಮತ್ತು ನಿಯಮಗಳನ್ನು ಸರಿಯಾಗಿ ಅನುಷ್ಠಾನಗೊಳ್ಳಬೇಕು ಎಂದು ಹೇಳಿದೆ.

1957 ರಲ್ಲಿ ಏನಾಯಿತು ಎಂಬುದನ್ನು ಜಾರಿಗೆ ತರಲು ಒಕ್ಕೂಟ, ರಾಜ್ಯ ಅಧಿಕಾರಿಗಳು ಮತ್ತು ಇತರ ಸಂಸ್ಥೆಗಳನ್ನು ತರಾಟೆಗೆ ತೆಗೆದುಕೊಳ್ಳಲು ಮತ್ತು ಆದೇಶ ರವಾನಿಸಲು ನಮಗೆ ಅವಕಾಶ ನೀಡಿ. ರಾಜ್ಯಗಳು ಮತ್ತು ಒಕ್ಕೂಟದೊಂದಿಗೆ ಅರ್ಧ ದಿನ ಕಳೆಯಬೇಕಾಗಿದೆ. ಅವರಿಗೆ ಕ್ರಿಯಾ ಯೋಜನೆ ಇದೆಯೇ ಅಥವಾ ಇಲ್ಲವೇ ಎಂದು ನೋಡಲು. ಸಮಸ್ಯೆಯು ಸಾವಿರ ಪಟ್ಟು ಹೆಚ್ಚು ಎಂದು ನ್ಯಾಯಪೀಠ ಅಸಮಾಧಾನ ಹೊರಹಾಕಿದೆ.

ನಮಗೆ ಶಾಸನಬದ್ಧ ನಿಬಂಧನೆಗಳ ಅನುಷ್ಠಾನ ಮಾತ್ರ ಬೇಕು. ಅದನ್ನು ಮಾಡಲು ನಮಗೆ ಅವಕಾಶ ನೀಡಿ. ನಮಗೆ ಕೆಲಸ ಮಾಡಲು ಅವಕಾಶ ನೀಡಿ."ನಮಗೆ ಮುಂದುವರಿಯಲು ಅವಕಾಶ ನೀಡಿ. ಅದೇ ವಿಷಯಗಳು ಮತ್ತೆ ಮತ್ತೆ ಬರುತ್ತಿವೆ. ಇದು ನ್ಯಾಯಾಲಯದ ವಿಚಾರಣೆಗಿಂತ ಸಾರ್ವಜನಿಕ ವೇದಿಕೆಯಾಗಿದೆ" ಎಂದು ಸುಪ್ರೀಂ ಕೋರ್ಟ್ ಹೇಳಿದೆ.

# ಉಡಮಗಲ್ ಖಾನಪುರ ಸರ್ಕಾರಿ ಶಾಲೆಯಲ್ಲಿ ವಿವೇಕಾನಂದರ ಜಯಂತಿ ಹಾಗೂ ರಾಷ್ಟ್ರೀಯ ಯುವ ದಿನಾಚರಣೆ ಸಂಭ್ರಮ




ಯುವಮಾರ್ಗ ಸುದ್ದಿ

**ರಾಯಚೂರು,ಕ.13–** ಭಾರತದ ಭವ್ಯ ಇತಿಹಾಸವನ್ನು ನಾವು ತಿರುಗಿ ನೋಡಿದಾಗ ಹಲವಾರು ಮಹನೀಯರ ಸಾಧನೆ ಮತ್ತು ಕಾಯಕವು ಇತಿಹಾಸದ ಪುಟಗಳಲ್ಲಿ ಚಿರಸ್ಥಾಯಿಯಾಗಿ ಉಳಿದಿವೆ. ಅಂತಹ ಮಹಾನ್ ಪುರುಷರಲ್ಲಿ ಒಬ್ಬರಾದ ಸ್ವಾಮಿ ವಿವೇಕಾನಂದರು ನಮ್ಮ ದೇಶದ ಸಂಸ್ಕೃತಿ ಮತ್ತು ನಾಡಿನ ಹಿರಿಮೆಯನ್ನು ವಿದೇಶಗಳಿಗೆ ಪರಿಚಯಿಸಿದ ಆದರ್ಶ ಮೂರ್ತಿಯಾಗಿದ್ದಾರೆ ಎಂದು ರಾಯಚೂರು ತಾಲೂಕಿನ ಉಡಮಗಲ್ ಖಾನಪುರ ಸರ್ಕಾರಿ ಪ್ರೌಢಶಾಲೆಯ ಕನ್ನಡ ಕಲಾ ಶಿಕ್ಷಕರು ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಸಹ ಕಾರ್ಯದರ್ಶಿಗಳಾದ ಡಾ. ದಂಡಪ್ಪ ಬಿರಾದಾರ ಅವರು ಅಭಿಪ್ರಾಯಪಟ್ಟರು.
ಶಾಲೆಯಲ್ಲಿ ದಿನಾಂಕ 12-01-2026 ರಂದು ಹಮ್ಮಿಕೊಳ್ಳಲಾಗಿದ್ದ ಸ್ವಾಮಿ ವಿವೇಕಾನಂದರ ಜಯಂತಿ ಹಾಗೂ ರಾಷ್ಟ್ರೀಯ ಯುವ ದಿನೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ವಿವೇಕಾನಂದರು 1863 ರಲ್ಲಿ ಭುವನೇಶ್ವರಿ ದೇವಿ ಮತ್ತು ವಿಶ್ವನಾಥ ದತ್ತರ ಮಗನಾಗಿ ಜನಿಸಿದರು. ಬಾಲ್ಯದಲ್ಲಿ ನರೇಂದ್ರ ಎಂಬ ಹೆಸರಿನಿಂದ ತುಂಟಾಟದ ಸ್ವಭಾವ ಹೊಂದಿದ್ದ ಇವರು, ಮುಂದೆ ರಾಮಕೃಷ್ಣ ಪರಮಹಂಸರ ಮಾರ್ಗದರ್ಶನ ಪಡೆದು ಆಧ್ಯಾತ್ಮಿಕ ಪಥದಲ್ಲಿ ಸಾಗಿದರು. ಚಿಕಾಗೋ ನಗರದಲ್ಲಿ ನಡೆದ ಸರ್ವಧರ್ಮ ಸಮ್ಮೇಳನದಲ್ಲಿ 'ಅಮೆರಿಕದ ಸಹೋದರ ಮತ್ತು ಸಹೋದರಿಯರೇ' ಎಂದು ಸಂಬೋಧಿಸುವ ಮೂಲಕ ಇಡೀ ಸಭೆಯ ಗೌರವಕ್ಕೆ ಪಾತ್ರರಾದರು. ಆ ಒಂದು ಶಬ್ದಕ್ಕೆ ಸಭಿಕರು ಚಪ್ಪಾಳೆ ತಟ್ಟುವ ಮೂಲಕ ಭಾರತೀಯ ಸಂಸ್ಕೃತಿಗೆ ಮನ್ನಣೆ ನೀಡಿದರು ಎಂದು ಬಿರಾದಾರ ಅವರು ಸ್ಮರಿಸಿದರು.
ಮುಂದುವರಿದು ಮಾತನಾಡಿದ ಅವರು, ಒತ್ತಾಯದ ಮೂಲಕ ಯಾವುದೇ ಧರ್ಮ ಅಥವಾ ಜಾತಿಯನ್ನು ಜನರಲ್ಲಿ ಬಿತ್ತಬಾರದು. ಸನ್ಯಾಸಿಯಾದವನು ಜಗತ್ತಿನ ಶಾಂತಿಯನ್ನು ಬಯಸುತ್ತಾನೆ. ವಿವಿಧ ಭಾಗಗಳಲ್ಲಿ ಹುಟ್ಟಿದ ನದಿಗಳು ಅಂತಿಮವಾಗಿ ಸಮುದ್ರವನ್ನು ಸೇರುವಂತೆ, ವಿವಿಧ ಧರ್ಮಗಳಲ್ಲಿ ಜನಿಸಿದವರು ಕೊನೆಗೆ ಮಣ್ಣನ್ನೇ ಸೇರುತ್ತಾರೆ ಎಂಬ ಸತ್ಯವನ್ನು ಅರ್ಥಮಾಡಿಕೊಂಡಾಗ ಮಾತ್ರ ಜಗತ್ತಿನಲ್ಲಿ ಶಾಂತಿ ನೆಲೆಸಲು ಸಾಧ್ಯ ಎಂದು ವಿವೇಕಾನಂದರ ಸಂದೇಶಗಳನ್ನು ಹಂಚಿಕೊಂಡರು.
ಇದೇ ಸಂದರ್ಭದಲ್ಲಿ ಶಾಲಾ ಮುಖ್ಯಗುರುಗಳಾದ ವೀರೇಶ್ ಅಂಗಡಿ ಮತ್ತು ಶಿಕ್ಷಕಿ ಶ್ರೀಮತಿ ಸರಸ್ವತಿ ಅವರು ಮಾತನಾಡಿ, ವಿವೇಕಾನಂದರ ವಿಚಾರಗಳು ಮತ್ತು ಅವರ ಸಾಧನೆಗಳನ್ನು ವಿದ್ಯಾರ್ಥಿಗಳು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು. ಕಾರ್ಯಕ್ರಮದ ಆರಂಭದಲ್ಲಿ ಕುಮಾರಿ ಗೀತಾ ಸ್ವಾಗತಿಸಿದರು ಮತ್ತು ಕೊನೆಯಲ್ಲಿ ಕುಮಾರಿ ದಿವ್ಯ ವಂದನಾರ್ಪಣೆ ಮಾಡಿದರು. ನೀಲಕಂಠ ಅವರು ಕಾರ್ಯಕ್ರಮದ ಸಂಘಟನೆಗೆ ಸಹಕರಿಸಿದರು. ವೇದಿಕೆಯ ಮೇಲೆ ಶಿಕ್ಷಕ ವೃಂದದವರಾದ ಪಾಂಡುರಂಗ ದೇಸಾಯಿ, ವೀಣಾ ಕುಲಕರ್ಣಿ, ಅನಿತಾ ಎನ್., ಮತ್ತು ಶಿವಲೀಲಾ ಸೇರಿದಂತೆ ವಿವಿಧ ತರಗತಿಗಳ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ರಾಜ್ಯಮಟ್ಟದ ಅಬಾಕಾಸ್, ವೇದಿಕ್ ಮ್ಯಾಥ್ಸ್ ನ ಪ್ರಶಸ್ತಿ , ಪ್ರಮಾಣ ಪತ್ರ ವಿತರಣೆ




**ಬಳ್ಳಾರಿ, ಜ,13–** ನಗರದ ಜೋಳದ ರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಅಬಾಕಾಸ್ ಸ್ಟಾರ್ಸ್ ಅಕಾಡೆಮಿ ಆಯೋಜಿಸಿದ ರಾಜ್ಯಮಟ್ಟದ ಅಬಾಕಾಸ್ ಹಾಗೂ ವೇದಿಕ್ ಮಾಥ್ಸ್ ನ ಪ್ರಶಸ್ತಿ ಹಾಗೂ ಪ್ರಮಾಣ ಪತ್ರ ವಿತರಣಾ ಸಮಾರಂಭದಲ್ಲಿ ಸುಮಾರು 250 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು

ಈ ಕಾರ್ಯಕ್ರಮದ ಉದ್ಘಾಟಕರಾಗಿ ಬಳ್ಳಾರಿ ಮಹಾನಗರ ಪಾಲಿಕೆಯ ಮಹಾಪೌರರಾದ ಪಿ ಗಾದೆಪ್ಪರವರು ಮಾತನಾಡಿ ವೇದಿಕ್ ಮ್ಯಾಥ್ಸ್ ಹಾಗೂ ಅಬಾಕಾಸ್ ನಲ್ಲಿ ಶಾಲಾ ಹಂತದ ಮಕ್ಕಳು ದೃಶ್ಯೀಕರಣದ ಮೂಲಕ ಯಾವುದೇ ಪೆನ್ ಹಾಗೂ ಪೇಪರ್ ನ ಸಹಾಯವಿಲ್ಲದೆ ಅದ್ಭುತವಾಗಿ ತಮ್ಮ ಚಾಣಕ್ಯತೆಯನ್ನು ಪ್ರದರ್ಶಿಸಿದ್ದು, ಸದರಿ ಅಬಾಕಾಸ್ ಮತ್ತು ವೇದಿಕ್ ಮಾಥ್ಸ್ ತರಗತಿಗಳು ಜಿಲ್ಲೆ ಹಾಗೂ ರಾಜ್ಯದ ಪ್ರತಿ ಶಾಲಾ ಹಂತದಲ್ಲಿ ಈ ತರಬೇತಿಗಳು ನಡಿಯಬೇಕು ಯಾಕೆಂದರೆ ನಾವುಗಳು ಗಣಿತದ ಎಂದರೇ ತಕ್ಷಣ ಹಿಂದೆ ಸರಿಯುತ್ತೇವೆ ಆ ಕಾರಣ ಅಬಕಾಸ್ ಮತ್ತು ವೇದಿಕ್ ಮ್ಯಾಥ್ಸ್ ಇವು ಬಹಳಷ್ಟು ಮಕ್ಕಳ ವಿದ್ಯಾಭ್ಯಾಸದಲ್ಲಿ ಅನುಕೂಲವಾಗುತ್ತದೆ ಎಂದು ಶುಭ ಕೋರಿದರು

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಬಳ್ಳಾರಿ ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಿಷ್ಠಿ ರುದ್ರಪ್ಪರವರು ಮಾತನಾಡಿ ಈ ಸ್ಪರ್ಧಾತ್ಮಕ ಜಗತ್ತಿನಲ್ಲಿ ವಿದ್ಯಾರ್ಥಿ ಗಳಿಗೆ ಇಂತಹ ಚುರುಕನ್ನು ನೀಡುವಂತಹ ವಿಷಯ ಅಬಾಕಾಸ್ ಮತ್ತು ವೇದಿಕ್ ಮ್ಯಾಥ್ಸ್ ತರಬೇತಿಯನ್ನು ನೀಡಿ ಸುಮಾರು ಇಲ್ಲಿ 250ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದು ನಿಜಕ್ಕೂ ಸಂತೋಷ ಈ ಕಾರ್ಯಕ್ರಮದ ಆಯೋಜಕರಿಗೆ ಹಾಗೂ ಪ್ರಶಸ್ತಿ ಪಡೆದ ಎಲ್ಲಾ ವಿದ್ಯಾರ್ಥಿಗಳಿಗೆ ಶುಭ ಕೋರಿದರು

ನಂತರದಲ್ಲಿ ಮಾತನಾಡಿದ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಶಿವಲಿಂಗಪ್ಪ ಹಂದಿಹಾಳ್ ಇಂದು ಮಕ್ಕಳ ವಿದ್ಯಾ ಜಗತ್ತಿನಲ್ಲಿ ಓದು ಜೊತೆಯಲ್ಲಿ ಸಾಹಿತ್ಯದ ಪುಸ್ತಕಗಳನ್ನು ಓದುವ ಅಭ್ಯಾಸಗಳನ್ನು ಮಕ್ಕಳು ಮಾಡಬೇಕು ವಿದ್ಯೆ ಜೊತೆ ಸಾಹಿತ್ಯ ಹೊಂದಿಕೊಂಡಲ್ಲಿ ಓದುವಂತ ಪ್ರತಿ ವಿಧ್ಯಾರ್ಥಿಯು ತನ್ನ ಗುರಿಯನ್ನು ಮುಟ್ಟಲು ಸಾಧ್ಯ ಎಂದು ಹೇಳಿ ಮಕ್ಕಳಿಗೆ ಪ್ರಶಸ್ತಿ ಪ್ರದಾನ ಮಾಡಿದ್ದರು.


ಕಾರ್ಯಕ್ರಮದ ಮುಖ್ಯ ಅತಿಯಾಗಿ ಆಗಮಿಸಿದಂತ ಜಿಂದಾಲ್ ಆಧರ್ಶ ವಿದ್ಯಾಲಯದ ಉಪ ಪ್ರಾಂಶುಪಾಲರಾದ ಶ್ರೀಮತಿ ಭಾಗ್ಯವತಿ ಗಾಜುಲ ರವರು* ಮಾತಾನಾಡಿ ಈ ವೇದಿಕ್ ಮಾಥ್ಸ್ ಅಬಾಕಾಸ್ ನಮ್ಮ ಜಿಂದಾಲ್ ನ ಎಲ್ಲಾ ಶಾಲೆಗಳಲ್ಲಿ ಅಭ್ಯಾಸ ಮಾಡುತ್ತಿದ್ದಾರೆ ಅದೇ ರೀತಿ ಈ ಆಯೋಜಕರು ಬಳ್ಳಾರಿ ಜಿಲ್ಲೆ ಮತ್ತು ರಾಜ್ಯದಲ್ಲಿ ತಮ್ಮ ಅಬ್ಬಾಸ್ ಅಕಾಡೆಮಿಯನ್ನು ವಿಸ್ತರಣೆ ಮಾಡಿ ಓದುವ ಮಕ್ಕಳಿಗೆ ಅನುಕೂಲವಾಗಲಿದೆ ಎಂದು ಹೇಳಿದರು .

ಕಾರ್ಯಕ್ರಮದ ಮುಖ್ಯ ಅಥಿತಿಗಳಾಗಿ ಖ್ಯಾತ ಕರಾಟೆ ತರಬೇತಿದಾರರು ರಾಜ್ಯ ಕರಾಟೆ ಶಿಕ್ಷಕರ ಸಂಘದ ವಕ್ತಾರಾದ ಕಟ್ಟೇಸ್ವಾಮಿ* ಮಾತನಾಡಿ ಈ ವೇದಿಕ್ ಮ್ಯಾಥ್ಸ್ ಎಷ್ಟು ಚಾಣಕ್ಷತನ ಜ್ಞಾನವನ್ನು ಪಡೆದಿದ್ದಿರಿ ತಾವೆಲ್ಲರೂ ಅದೇ ರೀತಿ ವಿದ್ಯಾಭ್ಯಾಸದ ಜೊತೆಯಲ್ಲಿ ಮಾನಸಿಕ ದೈಹಿಕವಾಗಿ ಸದೃಢರಾಗಲು ತಾವು ವಿವಿಧ ಕ್ರೀಡಾ ಮತ್ತು ವಿಶೇಷ ಚಟುವಟಿಕೆಗಳಲ್ಲಿ ಭಾಗವಹಿಸಲು ಅವಕಾಶ ಪೋಷಕರು ಮಾಡಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ಪ್ರಾಸ್ತಾವಿಕವನ್ನು ಸ್ಟಾರ್ ಅಬಾಕಾಸ್ ಅಕಾಡೆಮಿಯ ಮುಖ್ಯಸ್ಥರಾದ ಶೃತಿ ರವರು ಮಾತನಾಡಿದರು ನಿರೂಪಣೆಯನ್ನು ಜಿಂದಾಲ್ ಆದರ್ಶ ವಿದ್ಯಾಲಯ ಶಿಕ್ಷಕಿಯಾದ ಮಹಾದೇವಿ ನಡೆಸಿಕೊಟ್ಟರು* ..

# ನಾಪತ್ತೆಯಾಗಿರುವ ಚೀಟಿ ವೆಂಕಟೇಶ್ ಪತ್ತೆಗೆ ನೊಂದವರ ಮನವಿ

**ಬಳ್ಳಾರಿ,ಜ.13–** ಕಳೆದ 15 ದಿನಗಳಿಂದ ನಾಪತ್ತೆಯಾಗಿರುವ ಹಾವಂಬಾಯಿ ಪ್ರದೇಶದ ನಿವಾಸಿ ಚೀಟಿ ವೆಂಕಟೇಶ್ ಪತ್ತೆಗೆ. ಆತನ ಬಳಿ ಚೀಟಿ ಹಾಕಿ ನೊಂದಿರುವ ಜನತೆ ಇಂದು ಬ್ರೂಸ್ ಪೇಟೆ ಠಾಣೆ ಬಳಿಗೆ ಬಂದು ಅಲ್ಲಿಂದ ಎಸ್ಪಿ ಕಚೇರಿಗೆ ತೆರಳಿ ಮನವಿ ಮಾಡಿದ್ದಾರೆ.ನಾಪತ್ತೆಯಾಗಿರುವ ವೆಂಕಟೇಶ್ ಹಲವಾರು ವರ್ಷಗಳಿಂದ ಚೀಟಿ ವ್ಯವಹಾರ ಮಾಡುತ್ತಿದ್ದ. ಲಕ್ಷಾಂತರ ರೂಗಳ ಚೀಟಿ ಹಾಕುತ್ತಿದ್ದ. ನಗರದಲ್ಲಿ ಬಹುತೇಕ ವ್ಯಾಪಾರಿಗಳು, ವೈದ್ಯರು, ಅಂಗಡಿ ಮುಂಗಟ್ಟುಗಳ ಮಾಲೀಕರು, ಸಾರ್ವಜನಿಕರು ಪ್ರತಿ ತಿಂಗಳು ಚೀಟಿ ವ್ಯವಹಾರ ಮಾಡಿದ್ದರು.ಕೋಟ್ಯಾಂತರ ರೂಗಳ ಚೀಟಿ ವ್ಯವಹಾರ ಈತನದಾಗಿತ್ತು. ಆದರೆ ಈತ ಜ.30 ರಂದು ರಾತ್ರಿ ನಗರದ ಬೆಂಗಳೂರು ರಸ್ತೆಯ ಹೆಚ್.ಎಲ್.ಸಿ. ಕಾಲುವೆ ಬಳಿ ತನ್ನ ಬೈಕ್ ಬಿಟ್ಟು, ಅದರಲ್ಲಿ ತನ್ನ ಎರೆಡು



ಮೊಬೈಲ್ ಇಟ್ಟು ನಾಪತ್ತೆಯಾ ಗಿದ್ದಾನೆ. ಮನೆಯವರು ಈತನ ಬಗ್ಗೆ ನಾಪತ್ತೆ ಪ್ರಕರಣ ದಾಖಲಿಸಿದ್ದಾರೆ. ಆದರೆ ಮಾರುಕಟ್ಟೆಯಲ್ಲಿ ಈತ ಪೂರ್ವ ನಿರ್ಧಾರಿತನಾಗಿ ಐಪಿ ಇಟ್ಟು ಜನರಿಗೆ ವಂಚನೆ ಮಾಡಿ ತಲೆ ಮರೆಸಿಕೊಂಡಿದ್ದಾನೆ ಆತನನ್ನು ಪತ್ತೆಹಚ್ಚಿ ನಮಗೆ ನ್ಯಾಯ ದೊರಕಿಸಿಕೊಡಬೇಕೆಂದು ಆಗ್ರಹಿಸಿದ್ದಾರೆ.

# ಸ್ವಾಮಿ ವಿವೇಕಾನಂದ ವಿಕಸಿತ ಭಾರತದ ಕನಸು ಕಂಡಿದ್ದರು: ಜಿ.ವಿ.ಸಾಯಿ ಪ್ರಸಾದ್



**ಕಲಬುರಗಿ,ಜ.13–**"ಸ್ವಾಮಿ ವಿವೇಕಾನಂದರು ವಿಕಸಿತ ಭಾರತದ ಕನಸನ್ನು ಕಂಡಿದ್ದರು ಮತ್ತು ನಮ್ಮ ಪ್ರಧಾನ ಮಂತ್ರಿಗಳು ಅದನ್ನು ಸಕಾರಗೊಳಿಸುವ ಸಂಕಲ್ಪತೊಟ್ಟಿದ್ದಾರೆ. 2047 ರ ವೇಳೆಗೆ ಈ ಕನಸನ್ನು ನನಸಾಗಿಸಲು ಆಲ್ಫಾ ಮತ್ತು ಝಡ್ ಪೀಳಿಗೆಯ ಕಾರ್ಯನಿರ್ವಹಿಸುವ ಸಮಯ ಬಂದಿದೆ" ಎಂದು ಭಾರತೀಯ ಲೆಕ್ಕಪರಿಶೋಧನೆ ಮತ್ತು ಖಾತೆ ಸೇವಾ ಅಧಿಕಾರಿ ಜಿ ವಿ ಸಾಯಿ ಪ್ರಸಾದ್ ಹೇಳಿದರು.

ಕಲಬುರಗಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಸೋಮವಾರ ಆಯೋಜಿಸಿದ್ದ ಸ್ವಾಮಿವಿವೇಕಾನಂದರ 164 ನೇ ಜನ್ಮ ದಿನಾಚರಣೆಯ ಸಂದರ್ಭದಲ್ಲಿ ಮಾತನಾಡುತ್ತಿದ್ದರು.

ಸ್ವಾತಂತ್ರ್ಯದ ನಂತರ ನಾವು ಹಸಿವು, ಅಪೌಷ್ಟಿಕತೆ ಮತ್ತು ನಿರುದ್ಯೋಗದಿಂದ ಬಳಲುತ್ತಿದ್ದೆವು. ಆದರೆ ಈಗ ನಾವು ಮೂರನೇ ಅತಿದೊಡ್ಡ ಆರ್ಥಿಕತೆ ಮತ್ತು ಮೂರನೇ ಅತಿದೊಡ್ಡ ನವೋದ್ಯಮ ರಾಷ್ಟ್ರವಾಗಿದ್ದೇವೆ. 2047 ರ ವೇಳೆಗೆ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಲು ಬಯಸುತ್ತೇವೆ. ಇಂಟರ್ನೆಟ್ ಮತ್ತು ಯುಪಿಐ ಕ್ರಾಂತಿಯ ಮೂಲಕ ನಮ್ಮ ಶಕ್ತಿ ಏನೆಂದು ನಾವು ಜಗತ್ತಿಗೆ ತೋರಿಸಿದ್ದೇವೆ. ಭೌಗೋಳಿಕ–ರಾಜಕೀಯ ಸವಾಲುಗಳನ್ನು ಎದುರಿಸಲು ಮತ್ತು ನಮ್ಮ ದೇಶವನ್ನು ರಕ್ಷಿಸಲು ನಾವು ಎಲ್ಲಾ ವಲಯಗಳಲ್ಲಿ ಸ್ವಾವಲಂಬಿಗಳಾಗಬೇಕು. ಆದ್ದರಿಂದ ನಾವು ಸ್ಥಳೀಯ ತಂತ್ರಜ್ಞಾನ, ನವೋದ್ಯಮಗಳು, ಸಂಪತ್ತು ಸೃಷ್ಟಿ ಮತ್ತು ನಮ್ಮ ಸ್ವಂತ ಉತ್ಪನ್ನಗಳನ್ನು ಖರೀದಿಸಬೇಕು. ಟಾಟಾ, ಫ್ಲಿಪ್‌ಕಾರ್ಟ್, ಪೇಟಿಎಂ, ಶಿವಕಾಶಿ ಮತ್ತು ಇನ್ನೂ ಅನೇಕ ಉದಾಹರಣೆಗಳಿವೆ, ನಾವು ಎಲ್ಲವನ್ನೂ ನಮ್ಮದೇ ಆದ ರೀತಿಯಲ್ಲಿ ರಚಿಸಲು ಸಮರ್ಥರಾಗಿದ್ದೇವೆ. ನಮ್ಮ ಶಕ್ತಿ ಮತ್ತು ಸಂಪತ್ತು ನಮ್ಮ ಯುವ ಜನಸಂಖ್ಯೆ, ನಮ್ಮ ಸಂಸ್ಕೃತಿ ಮತ್ತು ಪರಂಪರೆಯಾಗಿದೆ. ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನು ಸಾಧಿಸಲು ನಾವು ಅದನ್ನು ಬಳಸಿಕೊಳ್ಳಬೇಕು ಎಂದು ಹೇಳಿದರು.

ಕುಲಪತಿ ಪ್ರೊ.ಬಟ್ಟು ಸತ್ಯನಾರಾಯಣ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ "ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನು ಸಾಧಿಸಲು ನಮ್ಮ ಯುವಕರ ಪ್ರತಿಭಾ ಪಲಾಯನವನ್ನು ನಿಲ್ಲಿಸಬೇಕು. ನಮ್ಮ ಇಂಜಿನಿಯರುಗಳು ನಮ್ಮದೇ ಆದ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಬೇಕು, ನಂತರ ನಾವು ಇತರರಿಗೆ ಭಯಪಡಬೇಕಾಗಿಲ್ಲ. ನಾವು ಇಸ್ರೇಲ್ ಮತ್ತು ಜಪಾನ್‌ನಿಂದ ಕಲಿಯಬೇಕು. ಅವರ ಬದ್ಧತೆ ಮತ್ತು ದೃಢಸಂಕಲ್ಪದ ಮೂಲಕ ಅವರು ಆಧುನಿಕ ರಾಷ್ಟ್ರಗಳನ್ನುನಿರ್ಮಿಸಿದ್ದಾರೆ. ಆದ್ದರಿಂದ ನಮ್ಮ ಯುವಕರು ರಾಷ್ಟ್ರೀಯ ಅಭಿವೃದ್ಧಿಗೆ ಬದ್ಧರಾಗಿರಬೇಕು ಮತ್ತು ದೃಢನಿಶ್ಚಯ ಹೊಂದಿರಬೇಕು. ಎನ್‌ಇಪಿ 2020 ಅಭಿವೃದ್ಧಿ

ಹೊಂದಿದ ರಾಷ್ಟ್ರಕ್ಕೆ ಅಡಿಪಾಯ ಹಾಕಿದೆ. ನಾವು ಆ ದಿಕ್ಕಿನಲ್ಲಿ ಕೆಲಸ ಮಾಡಬೇಕು" ಎಂದು ಹೇಳಿದರು.

ಕುಲಸಚಿವ ಪ್ರೊ. ಆರ್. ಆರ್. ಬಿರಾದರ ಕೂಡ ಈ ಸಂದರ್ಭದಲ್ಲಿ ಮಾತನಾಡಿ, "ನಮ್ಮ ಯುವಕರು ಹೆಚ್ಚು ಹೆಚ್ಚು ಸ್ಥಳೀಯ ಉತ್ಪನ್ನಗಳನ್ನು ಬಳಸಬೇಕು. ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಲು ಕೈಗಾರಿಕೀಕರಣ ಬಹಳ ಮುಖ್ಯ. ಅಮೆರಿಕ ಮತ್ತು ಇತರ ರಾಷ್ಟ್ರಗಳ ಬೆದರಿಕೆಯನ್ನು ಎದುರಿಸಲು ನಾವು ಸ್ವಾವಲಂಬಿಗಳಾಗಿರಬೇಕು. ಆದ್ದರಿಂದ ನಮ್ಮ ಪ್ರಧಾನಿ ನಮ್ಮನ್ನು ಸ್ವಾವಲಂಬಿಗಳಾಗಲು ಕೇಳುತ್ತಿದ್ದಾರೆ.ಸ್ಥಳೀಯ ಉತ್ಪನ್ನಗಳನ್ನು ಬಳಸಲು ಮತ್ತು ಭಾರತವನ್ನು ಸ್ವಾವಲಂಬಿಗಳನ್ನಾಗಿ ಮಾಡಲು ನಾವು ಬದ್ಧತೆಯನ್ನು ತೋರಬೇಕು" ಎಂದು ಹೇಳಿದರು.

ಈ ಸಂದರ್ಭದಲ್ಲಿ ಬೆಳಿಗ್ಗೆ "ಸ್ವದೇಶಿ ಓಟ&ಡಣಾಂಣ; ವನ್ನು ನಡೆಸಲಾಯಿತು ಮತ್ತು ವಿವಿಧ ಸ್ಪರ್ಧೆಗಳಲ್ಲಿ ವಿಜೇತರಿಗೆ ಬಹುಮಾನಗಳನ್ನು ನೀಡಲಾಯಿತು.

ಕಾರ್ಯಕ್ರಮ ಸಂಯೋಜಕ ಡಾ.ಲಿಂಗಮೂರ್ತಿ ಸ್ವಾಗತಿಸಿದರು, ಡಾ.ಬಸವರಾಜ ಕುಬಕಡ್ಡಿ ಸ್ವದೇಶಿ ಕುರಿತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಡಾ.ಜಯದೇವಿ ಜಂಗಮಶೆಟ್ಟಿ ಮತ್ತು ಡಾ.ಸ್ವಪ್ನಿಲ್ ಚಾಪೇಕರ್ ರಾಷ್ಟ್ರಗೀತೆ ಮತ್ತು ನಾಡ ಗೀತೆಯನ್ನು ಹಾಡಿದರು. ಡಾ.ಶ್ರೀಲಕ್ಷ್ಮಿ ಕಾರ್ಯಕ್ರಮವನ್ನು ನಿರೂಪಿಸಿ ವಂದಿಸಿದರುಪ್ರೊ.ಎಂ.ಎಸ್. ಪಸೋಡಿ, ಪ್ರೊ.ದೇವರಾಜಪ್ಪ, ಡಾ.ಪಿ.ಎಸ್. ಕಟ್ಟಿಮನಿ, ಡಾ.ಬಸವರಾಜ ಎಂ.ಎಸ್., ಡಾ.ಶಿವಕುಮಾರ ಬೆಳ್ಳಿ, ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ವಿಶ್ವಕ್ಕೆ ಭಾರತೀಯ ಸಂಸ್ಕೃತಿ ಪರಿಚಯಿಸಿದ ವಿವೇಕಾನಂದ



**ಬೀದರ್:ಜ.13–** ಸ್ವಾಮಿ ವಿವೇಕಾನಂದರು ವಿಶ್ವಕ್ಕೆ ಶ್ರೇಷ್ಠವಾದ ಭಾರತೀಯ ಸಂಸ್ಕೃತಿಯನ್ನು ಪರಿಚಯಿಸಿದ್ದರು ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಬೀದರ್ ತಾಲ್ಲೂಕು ಘಟಕದ ಮಾಜಿ ಅಧ್ಯಕ್ಷ ಪ್ರೋ ಉಮಾಕಾಂತ ಮೀಸೆ ಹೇಳಿದರು.

ಅಹಿಲ್ಯಾಬಾಯಿ ಹೋಳ್ಕರ ಸಾಂಸ್ಕೃತಿಕ ಮಹಿಳಾ ಸಂಘದ ವತಿಯಿಂದ ನಗರದ ಆದರ್ಶ ಐ.ಟಿ.ಐ.ನಲ್ಲಿ ಸೋಮವಾರ ಆಯೋಜಿಸಿದ್ದ ಸ್ವಾಮಿ ವಿವೇಕಾನಂದ ಜಯಂತಿ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಶಿಕಾಗೋದಲ್ಲಿ ಅವರು ಮಾಡಿದ ಭಾಷಣ ವಿಶ್ವದ ಗಮನ ಸೆಳೆದಿತ್ತು ಎಂದರು.

ಏಳಿ, ಎದ್ದೇಳಿ, ಗುರಿ ಮುಟ್ಟುವ ವರೆಗೆ ನಿಲ್ಲದಿರಿ ಎಂದು ಯುವಕರನ್ನು ಹುರಿದುಂಬಿಸುತ್ತಿದ್ದರು. ಅವರ ಆದರ್ಶಗಳು ಯುವಕರಿಗೆ ಪ್ರೇರಣೆಯಾಗಿವೆ ಎಂದರು. ಅಧ್ಯಕ್ಷತೆ ವಹಿಸಿದ್ದ ಕಾಲೇಜು ಅಧ್ಯಕ್ಷ ಬಕ್ಕಪ್ಪ ನಾಗೂರೆ ಮಾತನಾಡಿ, ವಿವೇಕಾನಂದರು ಹಾಗೂ ಮಹಾ ಪುರುಷರ ಆದರ್ಶ ಮೈಗೂಡಿಸಿಕೊಳ್ಳುವುದರಿಂದ ಸುಂದರ ಸಮಾಜ ಕಟ್ಟಲು ಸಾಧ್ಯವಿದೆ ಎಂದು ಹೇಳಿದರು. ಮನೋಹರ ಹುಪಳಾ, ರೇವಣಪ್ಪ ಮೂಲಗೆ, ಮಲ್ಲಿಕಾರ್ಜುನ ಮಲ್ಕಾಪುರೆ ಹಾಗೂ ಕಾಂಚನಾ ಸಾಂಸ್ಕತಿಕ ಕಾರ್ಯಕ್ರಮ ನಡೆಸಿಕೊಟ್ಟರು.

ಸಂಘದ ಅಧ್ಯಕ್ಷೆ ಕಾಂಚನಾ, ಕಾಲೇಜು ಪ್ರಾಚಾರ್ಯ ನವೀನ್ ಗೂಳೆ, ಮಲ್ಲಿಕಾರ್ಜುನ ಮುರ್ಕೆ ಉಪಸ್ಥಿತರಿದ್ದರು. ಕಿರಿಯ ತರಬೇತಿ ಅಧಿಕಾರಿ ವಿಜಯಕುಮಾರ ಬ್ಯಾಲಹಳ್ಳಿ ನಿರೂಪಿಸಿದರು. ಕಾವೇರಿ ಪಾಂಚಾಳ ಸ್ವಾಗತಿಸಿದರು. ಲಿಂಗದೇವ ಗುತ್ತಿ ವಂದಿಸಿದರು.

# ನಡೆದುಕೊಂಡು ಹೊರಟಿದ್ದ ಮಹಿಳೆ ಚಿನ್ನದ ಸರ ಕಳವು

**ಕಲಬುರಗಿ,ಜ.13–**ತರಕಾರಿ ಖರೀದಿಸಿ ಮನೆಗೆ ಹೋಗುತ್ತಿದ್ದ ಮಹಿಳೆಯೊಬ್ಬರ ಕೊರಳಲ್ಲಿನ ಚಿನ್ನದ ಸರ ಕಳವು ಮಾಡಿರುವ ಘಟನೆ ದತ್ತ ನಗರದ ಆಂಜನೇಯ ಸ್ವಾಮಿ ಕಮಾನ್ ಹತ್ತಿರ ನಡೆದಿದೆ.

ಕೀರ್ತಮ್ಮ ಚಂದ್ರಾರೆಡ್ಡಿ ಎಂಬುವವರು ತರಕಾರಿ ಖರೀದಿಸಿ ಮನೆಯ ಕಡೆ ಹೋಗುತ್ತಿದ್ದಾಗ ಬೈಕ್ ಮೇಲೆ ಬಂದ 25 ರಿಂದ 30 ವರ್ಷ ವಯಸ್ಸಿನ ಇಬ್ಬರು ಅಪರಿಚಿತ ಯುವಕರು ಶ್ರೀನಿವಾಸ ಡಾಕ್ಟರ್ ಮನೆ ಎಲ್ಲಿದೆ ಎಂದು ವಿಚಾರಿಸಿದಂತೆ ಮಾಡಿ ಮಹಿಳೆ ಕೊರಳಲ್ಲಿನ 1.60 ಲಕ್ಷ ರೂ.ಮೌಲ್ಯದ 40 ಗ್ರಾಂ.ಬಂಗಾರದ ಎರಡೆಳೆಯ ಬಂಗಾರದ ಸರ ಕಸಿದುಕೊಳ್ಳಲು ಯತ್ನಿಸಿದ್ದಾರೆ. ಆಗ ಮಹಿಳೆ ಎಚ್ಚೆತ್ತು ಸರ ಗಟ್ಟಿಯಾಗಿ ಹಿಡಿದಿದ್ದರಿಂದ ಅದು ತುಂಡಾಗಿ 2 ಗ್ರಾಂ.ಮಾತ್ರ ಇವರ ಬಳಿ ಉಳಿದಿದೆ. ಉಳಿದ




38 ಗ್ರಾಂ.ಚಿನ್ನದ ಸರ ಸರಗಳ್ಳರು ಕಿತ್ತುಕೊಂಡು ಪರಾರಿಯಾಗಿದ್ದಾರೆ. ಈ ಸಂಬಂಧ ಅಶೋಕನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆದಿದೆ.

# ಬಳ್ಳಾರಿಯಲ್ಲಿ ಸತತ ಮೂರನೇ ವರ್ಷವೂರಾಜ್ಯಟೆನಿಸ್ ಪಂದ್ಯಾವಳಿಗೆ ಜೆಎಸ್‌ಡಬ್ಲ್ಯೂ ಬೆಂಬಲ



**ಬಳ್ಳಾರಿ, ಜ, 13–** ಕ್ರೀಡೆ, ಆರೋಗ್ಯ ಮತ್ತು ಸಕ್ರಿಯಜೀವನಶೈಲಿಯನ್ನುಉತ್ತೇಜಿಸುವತನ್ನ ನಿರಂತರ ಬದ್ಧತೆಯನ್ನು ಪುನರುಚ್ಚರಿಸುತ್ತಾ, ಜೆಎಸ್‌ಡಬ್ಲ್ಯೂ ಸ್ಟೀಲ್ ವಿಜಯನಗರ ವರ್ಕ್ಸ್, ಸತತ ಮೂರನೇ ವರ್ಷವೂ, ಬಳ್ಳಾರಿಯ ಪೊಲೀಸ್‌ಜಿಮ್ಖಾನಾ ಆಯೋಜಿಸಿದ ಉತ್ತರಕರ್ನಾಟಕಟೆನಿಸ್ ಟೂರ್ನಮೆಂಟ್ ಜೆಎಸ್‌ಡಬ್ಲ್ಯೂ ಸ್ಟೀಲ್ ಮಾಸ್ಟರ್‌ಟ್ರೋಫಿ 2026 ರ ಪ್ರಧಾನ ಪ್ರಾಯೋಜಕರಾಗಿ ಪಾಲುದಾರಿಕೆ ಹೊಂದಿದೆ.ರಾಜ್ಯ ಮಟ್ಟದ ಪಂದ್ಯಾವಳಿಯು ಕರ್ನಾಟಕದಾದ್ಯಂತ ಸುಮಾರು 300 ಅನುಭವಿ ಟೆನಿಸ್ ಆಟಗಾರರನ್ನು ಒಟ್ಟುಗೂಡಿಸಿತು, ಈ ಪ್ರದೇಶದಲ್ಲಿ ಪ್ರಮುಖಕ್ರೀಡಾಕೂಟವಾಗಿತನ್ನ ಸ್ಥಾನಮಾನವನ್ನು ಬಲಪಡಿಸಿತು.

ಬಳ್ಳಾರಿ, ದಾವಣಗೆರೆ, ವಿಜಯಪುರ, ಧಾರವಾಡ, ಸಿಂದನೂರು, ಯಾದಗಿರಿ, ರಾಣೆಬೆನ್ನೂರು, ಕಲಬುರಗಿ, ಚಳ್ಳಕೆರೆ, ತುಮಕೂರು, ಸಿರುಗುಪ್ಪ, ಬಾಗಲಕೋಟೆ, ಲಿಂಗಸುಗೂರು, ಮಸ್ಕಿ ಮತ್ತು ಹಿರಿಯೂರಿನಟೆನಿಸ್ ಆಟಗಾರರು, ಜೆಎಸ್‌ಡಬ್ಲ್ಯೂ ಸ್ಟೀಲ್ ವಿಜಯನಗರ ವರ್ಕರಸ್‌ನಆಟಗಾರರೊಂದಿಗೆ, ಬಹು ಸಿಂಗಲ್ಸ್ ಮತ್ತುಡಬಲ್ಸ್ ವಯಸ್ಸಿನ ವಿಭಾಗಗಳಲ್ಲಿ ಸ್ಪರ್ಧಿಸಿದರು, ಜೀವಿತಾವಧಿಯ ಫಿಟ್‌ನಸ್‌ನನೆನಚೈತನ್ಯವನ್ನುಆಚರಿಸುತ್ತಾ ಸ್ಪರ್ಧಾತ್ಮಕ ಶ್ರೇಷ್ಠತೆಯನ್ನು ಪ್ರದರ್ಶಿಸಿದರು.

ಜನವರಿ 11, ಭಾನುವಾರ ಸಂಜೆ ನಡೆದ ಬಹುಮಾನ ವಿತರಣೆ ಮತ್ತು ಸಮಾರೋಪ ಸಮಾರಂಭವು ಪಂದ್ಯಾವಳಿಯ ಯಶಸ್ವಿ ಪರಾಕಾಷ್ಠೆಯನ್ನು ಗುರುತಿಸಿತು. ಈ ಕಾರ್ಯಕ್ರಮವನ್ನು ಮುಖ್ಯ ಅತಿಥಿಗಳಾಗಿ ಬಳ್ಳಾರಿ ವಿಭಾಗದ ಐಜಿಪಿ ಡಾ. ಪಿ. ಎಸ್. ಹರ್ಷ ಮತ್ತುಗೌರವ ಅತಿಥಿಗಳಾಗಿ ಬಳ್ಳಾರಿಯ ಪೊಲೀಸ್ ವರಿಷ್ಠಾಧಿಕಾರಿ ಡಾ. ಸುಮನ್ ಡಿ. ಪೆನ್ನೇಕರ್ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಜೆಎಸ್‌ಡಬ್ಲ್ಯೂ ಸ್ಟೀಲ್ ವಿಜಯನಗರ ವರ್ಕ್‌ರ್ಸ್‌ನಅನ್ನು ಪ್ರತಿನಿಧಿಸುವ ಮಾಜಿ ಪೊಲೀಸ್‌ಡಿಐಜಿ ಎಸ್. ಆನಂದ್, ಐಪಿಎಸ್ (ನಿವೃತ್ತ) ಜೊತೆಗೆಕಾರ್ಯನಿರ್ವಾಹಕ ಅಧ್ಯಕ್ಷ ರವಿ ರಾಜಶೇಖರರೆಡ್ಡಿ, ಕಾರ್ಯದರ್ಶಿ ಶಿವ ನಾಯಕ್ ಮತ್ತು ಪೊಲೀಸ್‌ಜಿಮ್ಖಾನಾ ಬಳ್ಳಾರಿಯನ್ನು ಪ್ರತಿನಿಧಿಸುವ ಖಜಾಂಚಿ ಸತೀಸ್‌ಕಾಂಡ್ರಾ ಉಪಸ್ಥಿತರಿದ್ದರು.

ಜೆಎಸ್‌ಡಬ್ಲ್ಯೂಸ್ಟೀಲ್ ಮಾಸ್ಟರ್‌ಟ್ರೋಫಿ, ಈಗ ಜೆಎಸ್‌ಡಬ್ಲ್ಯೂ ಜೊತೆಗಿನ ತನ್ನ ಮೂರನೇ ವರ್ಷದ ಸಹಯೋಗದಲ್ಲಿದೆ, ಇದು ಸಂಸ್ಥೆಯ ವಾರ್ಷಿಕ ಕ್ರೀಡೆ ಮತ್ತುಕ್ಷೇಮ ಕಾರ್ಯಕ್ರಮಗಳಲ್ಲಿ ಒಂದಾಗಿದೆ, ಇದು ಸಕ್ರಿಯ ಮತ್ತು ಆರೋಗ್ಯ ಕರಜೀವನ ಶೈಲಿಯನ್ನು ಉತ್ತೇಜಿಸುವಲ್ಲಿಅದರ ನಂಬಿಕೆಯನ್ನು ಪ್ರತಿಬಿಂಬಿಸುತ್ತದೆ– ಜೆಎಸ್‌ಡಬ್ಲ್ಯೂ ಸ್ಟೀಲ್ ವಿಜಯನಗರ ಮತ್ತು ಸೇಲಂ ವರ್ಕ್ಸ್ ನ ಅಧ್ಯಕ್ಷರಾದ ಪಿ.ಕೆ. ಮುರುಗನ್‌ರಿಂದ ಸತತವಾಗಿಒಂದುಉಪಕ್ರಮವನ್ನು ಬೆಂಬಲಿಸಲಾಗಿದೆ, ಪೊಲೀಸ್‌ಜಿಮ್ಖಾನಾ ಬಳ್ಳಾರಿಯಂತಹ ಸಂಸ್ಥೆಗಳೊಂದಿಗೆ ನಿರಂತರ ಸಹಭಾಗಿತ್ವದ ಮೂಲಕ, ಜೆಎಸ್‌ಡಬ್ಲ್ಯೂ ಪ್ರದೇಶದಾದ್ಯಂತಕ್ರೀಡಾ ಮನೋಭಾವ ಮತ್ತು ಸಮುದಾಯ ಬಾಂಧವ್ಯವನ್ನು ಬೆಳೆಸುವುದನ್ನು ಮುಂದುವರೆಸಿದೆ.

ಜೆಎಸ್‌ಡಬ್ಲ್ಯೂ ಸ್ಟೀಲ್ ಪರವಾಗಿ ಮಾತನಾಡಿದ ಎಸ್. ಆನಂದ್, ಕ್ರೀಡೆಗಳು ಜೆಎಸ್‌ಡಬ್ಲ್ಯೂನ ಸಮುದಾಯ ನಿಶ್ಚಿತಾರ್ಥದ ತತ್ವಶಾಸ್ತ್ರದ ಅವಿಭಾಜ್ಯ ಸ್ತಂಭವಾಗಿದೆಎಂದುಎತ್ತಿ ತೋರಿಸಿದರು. ಜೆಎಸ್‌ಡಬ್ಲ್ಯೂ ಸ್ಟೀಲ್ ವಿಜಯನಗರ ವರ್ಕ್ಸ್, ವರ್ಷಗಳಲ್ಲಿ, ಕ್ರೀಡಾ ಉಪಕ್ರಮಗಳನ್ನು ನಿರಂತರವಾಗಿ ಪ್ರೋತ್ಸಾಹಿಸಿದೆ, ಉತ್ತೇಜಿಸಿದೆ ಮತ್ತು ಬೆಂಬಲಿಸಿದೆ, ಜೆಎಸ್‌ಡಬ್ಲ್ಯೂಕಾರ್ಯನಿರ್ವಹಿಸುವ ಎಲ್ಲಾ ಸಮುದಾಯಗಳಲ್ಲಿ ಕ್ರೀಡೆಗಳನ್ನು ಶಿಸ್ತು, ತಂಡದ ಕೆಲಸ, ದೈಹಿಕ ಸದೃಢತೆ ಮತ್ತು ಮಾನಸಿಕ ಯೋಗಕ್ಷೇಮದ ಪ್ರಬಲ ಸಕ್ರಿಯಗೊಳಿಸುವಿಕೆ ಎಂದು ಗುರುತಿಸಿದೆ ಎಂದುಅವರು ಗಮನಿಸಿದರು.

ಎಲ್ಲಾ ವಿಭಾಗಗಳಲ್ಲಿ ವಿಜೇತರು, ರನ್ನರ್–ಅಪ್ ಮತ್ತು ಸೆಮಿಫೈನಲಿಗಳಿಗೆ ಬಹುಮಾನ ವಿತರಣೆಯೊಂದಿಗೆ ಪಂದ್ಯಾವಳಿ ಮುಕ್ತಾಯವಾಯಿತು.

@12bc = ಬಹುಮಾನ ವಿಜೇತರ ಪಟ್ಟಿ

**ಸಿಂಗಲ್ಸ್35+ ಸಿಂಗಲ್ಸ್: ವಿಜೇತಜಗದೀಶ್ R. P. (HST) । ರನ್ನರ್‌ಅಪ್ ಸೋಮ್‌ಎಸ್ ಕೆ (ಬಾಗಲಕೋಟೆ) । ಸೆಮಿಫೈನಲಿಸ್ಟಗಳು□ಮಾಜ್ (ಬಳ್ಳಾರಿ), ಮಲ್ಲು (ಯಾದಗಿರಿ)**

**45+ ಸಿಂಗಲ್ಸ್: ವಿಜೇತ ಜಿತೇಂದ್ರ (ಬಳ್ಳಾರಿ) । ರನ್ನರ್‌ಅಪ್‌ಕೊಂಡರೆಡ್ಡಿ (ಬಳ್ಳಾರಿ) । ಸೆಮಿಫೈನಲ್– ಅಶೋಕ್ (ಬಳ್ಳಾರಿ), ಪ್ರಭಾಕರ್ (ದಾವಣಗೆರೆ)**

**55+ ಸಿಂಗಲ್ಸ್: ವಿಜೇತಸಿ.ಟಿ.ಪಾಟೀಲ್ (ಸಿಂದನೂರು) । ರನ್ನರ್‌ಅಪ್ ಗುರುರಾಜ್‌ಪುರಾಣಿಕ್ । ಸೆಮಿಫೈನಲಿಗಳು– ಡಾ. ತಿಪ್ಪೆಸ್ವಾಮಿ (ಹಿರಿಯೂರು), ರಾಜೇಶ್ ಹಿರೇಮಠ (ತುಮಕೂರು)**

**65+ ಸಿಂಗಲ್ಸ್: ವಿಜೇತ ಬಾಲಸುಬ್ರಹ್ಮಣ್ಯ (ದಾವಣಗೆರೆ) । ರನ್ನರ್‌ಅಪ್ ಮಂಜುನಾಥ್ (ದಾವಣಗೆರೆ) । ಸೆಮಿಫೈನಲಿಸ್ಟಗಳು– ಜೋಸೆಫ್‌ಕುಮಾರ್ (ಬಳ್ಳಾರಿ), ಕುಮಾರ್ (ತುಮಕೂರು)**

**ಡಬಲ್ಸ್**

**35+ಡಬಲ್ಸ್:ವಿಜೇತರು ಜಗ್ಗು&ಮಲ್ಲು (ಯಾದಗಿರಿ) ।ರನ್ನರ್‌ಅಪ್ ಅನಿಲ್&ರುದ್ರೇಶ್ (ದಾವಣಗೆರೆ) । ಸೆಮಿಫೈನಲಿಸ್ಟಗಳು ವಸುಪಾಮತ್ತುಕಿಶೋರ್ (ಸಿಂದನೂರು), ವಿಶಾಲ್ ಮತ್ತುಹರ್ಷ (ದಾವಣಗೆರೆ)**

**45+ಡಬಲ್ಸ್: ವಿಜೇತರು ಜಿತೇಂದ್ರ&ಡಾ. ಸತೀಶ್ (ಬಳ್ಳಾರಿ) । ರನ್ನರ್‌ಅಪ್ ಅನಿಲ್&ರುದ್ರೇಶ್ (ದಾವಣಗೆರೆ) । ಸೆಮಿಫೈನಲಿಸ್ಟಗಳು ಸಿ.ಟಿ.ಪಾಟೀಲ್ ಮತ್ತುಮನೀಶ್ (ಸಿಂದನೂರು), ಕುಮಾರ್‌ಸ್ವಾಮಿಮತ್ತುಕಿಶೋರ್**

**55+ಡಬಲ್ಸ್: ವಿಜೇತರು ಉದಯಭಾಸ್ಕರ್‌ಮತ್ತುವಿರುಕಾಕ್ಷರೆಡ್ಡಿ (ಬಳ್ಳಾರಿ) । ರನ್ನರ್ಸ್–ಅಪ್ ಅ. ಖಿ. ಪಾಟೀಲ್&ಗುರುಪಾದಯ್ಯ (ಸಿಂದನೂರು) । ಸೆಮಿಫೈನಲಿಸ್ಟಗಳು ಉಜ್ವಲ್ ಸಕ್ರಿ ಮತ್ತು ನಂದಕುಮಾರ್, ಸುದರ್ಶನ್‌ರೆಡ್ಡಿ ಮತ್ತುಗೋಪಾಲ್**

**65+ಡಬಲ್ಸ್: ವಿಜೇತರು ಮಂಜುನಾಥ&ಬಾಲಸುಬ್ರಮಣ್ಯಂ (ದಾವಣಗೆರೆ) । ರನ್ನರ್‌ಅಪ್ – ಜೋಸೆಫ್ ಕುಮಾರ್&ಸೂರ್ಯಪ್ರಕಾಶ್ (ಬಳ್ಳಾರಿ) । ಸೆಮಿಫೈನಲಿಸ್ಟಗಳು ಕಲಂದ್&ಗಣ್ಣಾಡತಡಿ (ಧಾರವಾಡ), ಮಲ್ಲೇಶಪ್ಪ ಮತ್ತುಚಂದ್ರಪ್ಪ (ದಾವಣಗೆರೆ)**

**70+ಡಬಲ್ಸ್: ವಿಜೇತರು ಜೋಸೆಫ್ ಕುಮಾರ್ ಮತ್ತುಗಂಗಾಧರತಾಡಿ (ಬಳ್ಳಾರಿ) । ರನ್ನರ್‌ಅಪ್– ಮಲ್ಲೇಶಪ್ಪಮತ್ತುಚಂದ್ರಪ್ಪ (ದಾವಣಗೆರೆ) । ಸೆಮಿಫೈನಲಿಸ್ಟಗಳು – ಜುಬೇರ್ ಪಾಷಾ ಮತ್ತು ಹೊಸ್ಮತ್, ಶ್ಯಾವ್ ಜೋಶಿಮತ್ತುಕಲ್ಮಾಡ್ (ಧಾರವಾಡ**

# ಸ್ವಾಮಿ ವಿವೇಕಾನಂದ ಜಯಂತಿ, ರಾಷ್ಟ್ರೀಯ ಯುವ ದಿನಾಚರಣೆ ಮೆರವಣಿಗೆ




**ಕಲಬುರಗಿ,ಜ.13–**ಸ್ವಾಮಿ ವಿವೇಕಾನಂದರ ಜಯಂತಿಯ ಅಂಗವಾಗಿ ಹಾಗೂ ರಾಷ್ಟ್ರೀಯ ಯುವ ದಿನಾಚರಣೆಯ ನಿಮಿತ್ತ, ವಿವೇಕಾನಂದ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ವತಿಯಿಂದ ಸೋಮವಾರ ನಗರ ಮಟ್ಟದ ಮೆರವಣಿಗೆ ಆಯೋಜಿಸಲಾಯಿತು.

ಯುವಕರಿಗೆ ಸ್ವಾಮಿ ವಿವೇಕಾನಂದರ ಜೀವನ, ದೃಷ್ಟಿ ಹಾಗೂ ಉಪದೇಶಗಳಿಂದ ಪ್ರೇರಣೆ ನೀಡುವ ಉದ್ದೇಶದಿಂದ ಸಂಸ್ಥೆಯು 2006 ರಿಂದ ಪ್ರತಿ ವರ್ಷವೂ ಈ ಕಾರ್ಯಕ್ರಮವನ್ನು ನಿರಂತರವಾಗಿ ಆಯೋಜಿಸುತ್ತಾ ಬಂದಿದ್ದು, ಮೆರವಣಿಗೆಯು ಬೆಳಿಗ್ಗೆ 9:00 ಗಂಟೆಗೆ ಗಂಜ್ ರಸ್ತೆ, ಬಾಂಬೂ ಬಜಾರ್ ಸಮೀಪದ ಸುಭಾಷ್ ಚಂದ್ರ ಬೋಸ್ ಪ್ರತಿಮೆಯಿಂದ ಆರಂಭಗೊಂಡು ಕಿರಾಣಿ ಬಜಾರ್, ಸೂಪರ್ ಮಾರ್ಕೆಟ್ ಚೌಕ್ ಪೊಲೀಸ್ ಠಾಣೆ, ಭಾಂಡೆ ಬಜಾರ್, ಜಗತ್ ವೃತ್ತ, ಎಸ್.ಎಂ. ಪಂಡಿತ್ ರಂಗ ಮಂದಿರ, ಎಸ್‌ವಿಪಿ ವೃತ್ತ ಹಾಗೂ ಜಿಲ್ಲಾ ನ್ಯಾಯಾಲಯದ ಮೂಲಕ ಸಾಗುತ್ತಾ ಆನಂದ ಹೋಟೆಲ್ ಹಿಂಭಾಗ, ವಿಠಲ್ ನಗರದಲ್ಲಿರುವ ವಿವೇಕಾನಂದ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ ಸಮಾಪ್ತಿಯಾಯಿತು.

ಪ್ರೋ.ನರೇಂದ್ರ ಬಡಶೇಶಿ , ಕಾಲೇಜಿನ ಪ್ರಾಂಶುಪಾಲರಾದ ಆಶಿಕ್ ರೆಡ್ಡಿ ಹಾಗೂ ಡಾ.ಮೋಹನ್ ರಾಥೋಡ್ ಅವರು ಬಾಂಬೂ ಬಜಾರ್ ಸಮೀಪದ ಸುಭಾಷ್ ಚಂದ್ರ ಬೋಸ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಧ್ವಜ ಹಾರಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು.

ಅಲಂಕರಿಸಲಾದ ವಾಹನದ ಮೇಲೆ ಪ್ರತಿಷ್ಠಾಪಿಸಲಾದ ಸ್ವಾಮಿ ವಿವೇಕಾನಂದರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಲಾಗಿದ್ದು, ದೇಶಭಕ್ತಿ ಗೀತೆಗಳ ಧ್ವನಿವ್ಯವಸ್ಥೆಯೊಂದಿಗೆ ಮೆರವಣಿಗೆಯು ಸಾಗಿತು. 600 ಕ್ಕೂ ಹೆಚ್ಚು

ವಿದ್ಯಾರ್ಥಿಗಳು ಮೆರವಣಿಗೆಯಲ್ಲಿ ಭಾಗವಹಿಸಿ, ಸ್ವಾಮಿ ವಿವೇಕಾನಂದರ ಪ್ರೇರಣಾದಾಯಕ ಉಕ್ತಿಗಳಿರುವ ಫಲಕಗಳನ್ನು ಹಿಡಿದು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು ಹಾಗೂ ಘೋಷಣೆಗಳನ್ನು ಕೂಗಿದರು.ನಂತರ ಕಾಲೇಜಿನ ಆವರಣದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಪ್ರಾಂಶುಪಾಲರಾದ ಆಶಿಕ್ ರೆಡ್ಡಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಭಾಷಣ ಮಾಡಿದರು. ಹಲವು ವಿದ್ಯಾರ್ಥಿಗಳು ಈ ಸಂದರ್ಭದಲ್ಲಿ ಮಾತನಾಡಿದರು.ಕಾಲೇಜಿನ ನಿರ್ದೇಶಕ ಮಂಡಳಿಯ ಸದಸ್ಯರಾದ ಶಿವಲಿಂಗಪ್ಪ ರಾವೂರು, ಲಕ್ಷ್ಮಿಪ್ರಸಾದ್ ಜಾಜಿ, ಗಿರಿಸ್‌ಕುಮಾರ್ ನವಾಣಿ, ಶ್ರೀಧರ್ ಕುಲಕರ್ಣಿ ಹಾಗೂ ವೆಂಕಟ್ರೇಶ್ ಗೌಡ್ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಡಾ. ಮೋಹನ್ ರಾಥೋಡ್, ಅಜಯಕುಮಾರ್ ಶೆಟ್ಟಿ, ಸುದರ್ಶನ ಸ್ವಾಮಿ, ಬಸವರಾಜ ಹಿರೇಮಠ, ಶರಣ ಚಾಂಗಲಿ, ರಾಜಶೇಖರ ಹವಾಲ್ದಾರ್, ಕೃಷ್ಣಕುಮಾರ್ ಕೆ, ಗುರುಪ್ರಸಾದ್, ಆಕಾಶ್, ಮಹೇಶ್ ದೇಶಪಾಂಡೆ, ಶಿ ಸಿದ್ರಾಮ್ ತುಳಸಿ, ಶ್ರೀರಂಗ್ ಎಂ, ಬಸಯ್ಯ ಸ್ವಾಮಿ, ರಾಜಶೇಖರ ವಾಡಿ, ಪ್ರಭಾ ಹುಗಾರ, ಮಿಸ್. ಶುಭಾ ಸಜ್ಜನ್, ಹೀನಾ ಖಾನ್, ಸ್ವಪ್ನಕುಮಾರಿ, ಕಿರಣ್ ಬಿ, ಬಂದನಾ ಚಟರ್ಜಿ, ಮಿಸ್. ಮುಷ್ಫೆರಾ ಕುಲ್ಸುಮ್, ತೌಸೀಫ್ ಅಂಜುಂ, ಅಮರೇಶ್, ರಾಜೇಶ್ವರಿ, ನೀಲಮ್ಮ ಹಾಗೂ ಇತರರು ಉಪಸ್ಥಿತರಿದ್ದರು.

# ಸ್ವಾಮಿ ವಿವೇಕಾನಂದ ಜಯಂತಿ ಪ್ರಯುಕ್ತ ಮದ್ಲಾಪುರು ಪ್ರೌಢಶಾಲೆಯಲ್ಲಿ ಉಚಿತ ಯೋಗ ಶಿಬಿರ

ಯುವಮಾರ್ಗ ಸುದ್ದಿ



**ಮಾನ್ವಿ,ಜ.13–** ಸ್ವಾಮಿ ವಿವೇಕಾನಂದ ಜಯಂತಿ ಪ್ರಯುಕ್ತ ಪಟ್ಟಣದ ಮದ್ಲಾಪುರು ಪ್ರೌಢಶಾಲೆಯಲ್ಲಿ ಶಾಲಾ ಮಕ್ಕಳಿಗಾಗಿ ಉಚಿತ ಯೋಗ ಶಿಬಿರವನ್ನು ಆಯೋಜಿಸಲಾಯಿತು. ಈ ಶಿಬಿರವನ್ನು ಯೋಗ ಸನ್ನಿಧಿ ಜ್ಞಾನ ವಿದ್ಯಾ ಪೀಠ ಟ್ರಸ್ಟ್, ಮಾನ್ವಿ ವತಿಯಿಂದ ಹಮ್ಮಿಕೊಳ್ಳಲಾಗಿದ್ದು, ಯೋಗ ಗುರು ಅನ್ನದಾನಯ್ಯ ಅವರು ಶಾಲಾ ಮಕ್ಕಳಿಗೆ ಯೋಗಾಭ್ಯಾಸವನ್ನು ತರಬೇತಿ ರೂಪದಲ್ಲಿ ತಿಳಿಸಿಕೊಟ್ಟರು.

ಶಿಬಿರದಲ್ಲಿ ತ್ರಿಕೋಣಾಸನ, ಪದ್ಮಾಸನ, ಗೋಮುಖಾಸನ, ಪಾದಾಹಸ್ತಾಸನ ಸೇರಿದಂತೆ ವಿವಿಧ ಯೋಗಾಸನಗಳು, ಪ್ರಾಣಾಯಾಮಗಳು ಹಾಗೂ ಮುದ್ರೆಗಳ ಅಭ್ಯಾಸವನ್ನು ಮಕ್ಕಳಿಗೆ ಪ್ರಾಯೋಗಿಕವಾಗಿ ಹೇಳಿಕೊಡಲಾಯಿತು. ನಂತರ ಧ್ಯಾನಾಭ್ಯಾಸ ನಡೆಸಿ ಶಿಬಿರವನ್ನು ಸಮರ್ಪಕವಾಗಿ ಮುಕ್ತಾಯಗೊಳಿಸಲಾಯಿತು.

ಈ ಸಂದರ್ಭದಲ್ಲಿ ರಾಯಚೂರಿನ ಡಯಟ್ ಶಿಕ್ಷಣಾಧಿಕಾರಿಗಳಾದ ಜೀವನ್ ಸಾಬ್ ಮಾತನಾಡಿ, ರಾಯಚೂರು ಜಿಲ್ಲೆದ್ಯಾಂತ ಸರಕಾರಿ ಶಾಲಾ ಮಕ್ಕಳಿಗಾಗಿ ನಿರಂತರವಾಗಿ ಯೋಗ ಶಿಬಿರಗಳನ್ನು ಆಯೋಜಿಸುತ್ತಿರುವ ಯೋಗ ಗುರು ಅನ್ನದಾನಯ್ಯ ಅವರ ಸೇವೆ ಶ್ಲಾಘನೀಯವಾಗಿದ್ದು, ಇಂತಹ ಯೋಗ ಶಿಬಿರಗಳು ಮಕ್ಕಳ ಶೈಕ್ಷಣಿಕ ಪ್ರಗತಿ ಹಾಗೂ ಉತ್ತಮ ಫಲಿತಾಂಶಕ್ಕೆ ಸಹಕಾರಿಯಾಗುತ್ತವೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಶಾಲೆಯ ಮುಖ್ಯೋಪಾಧ್ಯಾಯರಾದ ನಾಗಪ್ಪ ಮಾತನಾಡಿ, ನಿಯಮಿತ ಯೋಗಾಭ್ಯಾಸದಿಂದ ಮಕ್ಕಳ ನರನಾಡಿಗಳಲ್ಲಿ ರಕ್ತಸಂಚಾರ ಸುಧಾರಿಸಿ ದೇಹದ ಆರೋಗ್ಯ ಹೆಚ್ಚುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಾಲೆಯ ಸಹ ಶಿಕ್ಷಕರಾದ ದ್ಯಾವಪ್ಪ, ಶ್ರೀಕಾಂತ್, ಸಂದೀಪ್, ಮಾಜೀದ್ ಅಲಿ ಖಾನ್, ತಸ್ಲೀಮ್ ಸಲೋಮಿ ಸೇರಿದಂತೆ ಶಾಲಾ ಮಕ್ಕಳು ಭಾಗವಹಿಸಿ ಯೋಗ ಶಿಬಿರವನ್ನು ಯಶಸ್ವಿಗೊಳಿಸಿದರು.

# ಋತುಚಕ್ರದ ಸಮಯದಲ್ಲಿ ಮಾಸಿಕ ಒಂದು ದಿನ ವೇತನ ಸಹಿತ ರಜೆ ಸೌಲಭ್ಯ

**ರಾಯಚೂರು ಜ,13–** ವಿವಿಧ ಕಾರ್ಮಿಕ ಕಾಯ್ದೆಗಳಡಿ ನೋಂದಣಿಯಾಗಿರುವ ಉದ್ದಿಮೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ನೌಕರರಿಗೆ ಅವರ ಋತುಚಕ್ರದ ಸಮಯದಲ್ಲಿ ಮಾಸಿಕ ಒಂದು ದಿನದ ವೇತನ ಸಹಿತ ರಜೆ ಸೌಲಭ್ಯವನ್ನು ಉದ್ಯೋಗದಾತರು ಪಡೆಯಬೇಕು ಎಂದು ಕಲಬುರಗಿ ಪ್ರಾದೇಶಿಕ ಉಪ ಕಾರ್ಮಿಕ ಆಯುಕ್ತರು ಡಾ.ವೆಂಕಟೇಶ ಅ.ಶಿಂದಿಹಟ್ಟಿ ಅವರು ತಿಳಿಸಿದ್ದಾರೆ.

ಕಾರ್ಖಾನೆಗಳ ಕಾಯ್ದೆ 1948, ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ 1961, ತೋಟ ಕಾರ್ಮಿಕರ ಕಾಯ್ದೆ 1951, ಬೀಡಿ ಮತ್ತು ಸಿಗಾ ರ್ಕಾರ್ಮಿಕರ ಕಾಯ್ದೆ 1966, ಮತ್ತು ಮೋಟಾರು ಸಾರಿಗೆ ಕಾರ್ಮಿಕರ ಕಾಯ್ದೆ 1961ರಡಿ ನೋಂದಣಿಯಾಗಿರುವ ಎಲ್ಲಾ ಕೈಗಾರಿಕೆಗಳು ಹಾಗೂ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 18 ರಿಂದ 52 ವರ್ಷದ ವಯೋಮಿತಿಯ ಎಲ್ಲಾ ಖಾಯಂ, ಗುತ್ತಿಗೆ, ಹೊರಗುತ್ತಿಗೆ ಮಹಿಳಾ ಕಾರ್ಮಿಕರುಗಳಿಗೆ ಅವರ ಋತುಚಕ್ರದ ಸಮಯದಲ್ಲಿ ಪ್ರತಿ ಮಾಸಿಕ ಒಂದು ದಿನದ ರಜೆಯಂತೆ ವಾರ್ಷಿಕ 12 ದಿನಗಳ ವೇತನ ಸಹಿತ ರಜೆಯ ಸೌಲಭ್ಯವನ್ನು ಉದ್ಯೋಗದಾತರು ಒದಗಿಸುವಂತೆ ಸರ್ಕಾರವು ಆದೇಶಿಸಿದ್ದು, ಮಹಿಳಾ ನೌಕರರು ಆಯಾ ತಿಂಗಳ ಋತುಚಕ್ರ ರಜೆಯನ್ನು ಆಯಾ ತಿಂಗಳಿನಲ್ಲಿಯೇ ಬಳಸಿಕೊಳ್ಳಬೇಕು, ಮತ್ತು ಋತುಚಕ್ರ ರಜೆ ಪಡೆಯಲು ಮಹಿಳಾ ನೌಕರರು ಯಾವುದೇ ವೈದ್ಯಕೀಯ ಪ್ರಮಾಣ ಪತ್ರ ಒದಗಿಸುವ ಅವಶ್ಯಕತೆ ಇರುವುದಿಲ್ಲ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಾಲ್ಮೀಕಿ ನಾಯಕ ಸಮಾಜದ ಅಭಿವೃದ್ಧಿಗೆ ಶ್ರಮವಹಿಸಿ: ರಾಜ್ಯಾಧ್ಯಕ್ಷ ರವಿಚಂದ್ರನ್ ನಾಯಕ

ಯುವಮಾರ್ಗ ಸುದ್ದಿ



**ದೇವದುರ್ಗ,ಜ.13–** ರಾಜ್ಯದಲ್ಲಿ ವಾಲ್ಮೀಕಿ ನಾಯಕ ಸಮಾಜದ ಜನಾಂಗವು ಸಮಾಜದಲ್ಲಿ ಸಾಕಷ್ಟು ಸವಾಲುಗಳನ್ನು ಎದುರಿಸುತ್ತಿದೆ. ಜನಾಂಗವು ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕವಾಗಿ ಬೆಳೆಯಲು ಸಂಘಟಿತರಾಗಬೇಕಾದ ಅನಿವಾರ್ಯತೆ ಇದೆ ಎಂದು ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಮಿತಿ ರಾಜ್ಯಾಧ್ಯಕ್ಷ ರವಿಚಂದ್ರನ್ ನಾಯಕ ಹೇಳಿದರು.

ಅವರು ಇತ್ತೀಚಿಗೆ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಹಮ್ಮಿಕೊಂಡಿದ್ದ ಸಭೆಯಲ್ಲಿ ನೂತನ ಪದಾಧಿಕಾರಿಗಳಿಗೆ ಆದೇಶ ಪತ್ರ ವಿತರಿಸಿ ಮಾತನಾಡಿದರು.

ವಾಲ್ಮೀಕಿ ನಾಯಕ ಸಮಾಜದಲ್ಲಿ ಯಾವೊಬ್ಬ ವಿದ್ಯಾರ್ಥಿ ಶಿಕ್ಷಣ ವಂಚಿತರಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಸರ್ಕಾರದ ಪ್ರತಿಯೊಂದು ಯೋಜನೆಗಳು ಮನೆ ಬಾಗಿಲಿಗೆ ಮುಟ್ಟಿಸುವ ಪ್ರಯತ್ನವನ್ನು ಪ್ರತಿಯೊಬ್ಬರು ಮಾಡಬೇಕು. ವಾಲ್ಮೀಕಿ ನಾಯಕ ಸಮಾಜದವರು ಅನ್ಯ ಜಾತಿ ಧರ್ಮದವರೊಂದಿಗೆ ಉತ್ತಮ ಸಂಬಂಧವನ್ನು ಬೆಳೆಸಿಕೊಂಡು ಸಮಾಜದ ಹಕ್ಕುಗಳ ರಕ್ಷಣೆಗೆ ಬದ್ಧರಾಗಬೇಕು ಮತ್ತು ಪ್ರತಿಯೊಬ್ಬರು ಶಿಕ್ಷಣವನ್ನು ಪಡೆದು ವಾಲ್ಮೀಕಿ ನಾಯಕ ಜನಾಂಗದ ಅಭಿವೃದ್ಧಿಗೆ ಶ್ರಮವಹಿಸಿ ಇತರರಿಗೆ ಮಾದರಿಯಾಗಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ಸುಜಾತ ನಾಯಕ, ರಾಜ್ಯ ಸಂಚಾಲಕ ವೀರೇಶ ನಾಯಕ ಮಟಮಾರಿ, ರಾಜ್ಯ ಕಾರ್ಯದರ್ಶಿ ಮಂಜುನಾಥ ನಾಯಕ, ರಾಯಚೂರು ಜಿಲ್ಲಾಧ್ಯಕ್ಷ ರವಿ. ಬಿ. ಮಾಕಾಪೂರು, ಜಿಲ್ಲಾ ಉಪಾಧ್ಯಕ್ಷ ಶಿವರಾಜ ನಾಯಕ ಗೌಡೂರು, ಜಿಲ್ಲಾ ಗೌರವ ಅಧ್ಯಕ್ಷ ನರಸಣ್ಣ ನಾಯಕ ಕಮಲದಿನ್ನಿ, ಜಿಲ್ಲಾ ಕಾರ್ಯಾಧ್ಯಕ್ಷ ಶಿವರಾಯ ನಾಯಕ ಯಮನಾಳ, ಜಿಲ್ಲಾ ಖಜಾಂಚಿ ಬಸವರಾಜ ನಾಯಕ ಮಸ್ಕಿ, ಮಾನ್ವಿ ತಾಲೂಕಾಧ್ಯಕ್ಷ ನಾಗರಾಜ ನಾಯಕ ಗದಗ ಹಿರೇಕೊಟ್ನೆಕಲ್, ಸಿರವಾರ ತಾಲೂಕಾಧ್ಯಕ್ಷ ಕೆ.ಶಿವಪ್ಪ ನಾಯಕ ಕಲ್ಲೂರು, ಉಪಾಧ್ಯಕ್ಷ ನಿಂಗಯ್ಯ ನಾಯಕ ಗಣದಿನ್ನಿ, ವಿ.ರವಿಕುಮಾರ ನಾಯಕ ಗಣದಿನ್ನಿ, ಲಿಂಗಸೂರು ತಾಲೂಕು ಅಧ್ಯಕ್ಷ ರಮೇಶ ನಾಯಕ, ಉಪಾಧ್ಯಕ್ಷ ಅಮರ ಗುಂಡಪ್ಪ, ಮಸ್ಕಿ ತಾಲೂಕ ಪ್ರಧಾನ ಕಾರ್ಯದರ್ಶಿ ದೇವರಾಜ ನಾಯಕ, ರಾಯಚೂರು ಗ್ರಾಮೀಣ ತಾಲೂಕಿನ ತಾಲೂಕಾಧ್ಯಕ್ಷ ಸುರೇಶ ನಾಯಕ ಹಳೆ ಮಲಿಯಾಬಾದ್, ಪ್ರಧಾನ ಕಾರ್ಯದರ್ಶಿ ಜಿ. ದುಳ್ಳಯ್ಯ ನಾಯಕ ಪುಚ್ಚಲದಿನ್ನಿ, ಸಿಂಧನೂರು ತಾಲೂಕಿನ ತಾಲೂಕಾಧ್ಯಕ್ಷ ರವೀಂದ್ರ ನಾಯಕ ಸೇರಿದಂತೆ ಅನೇಕರು ಇದ್ದರು.

# ರಾಯಚೂರು ಉತ್ಸವ: ಜನವರಿ 25ರಂದು ಮ್ಯಾರಥಾನ್

**ರಾಯಚೂರು ಜ,13–** ರಾಯಚೂರು ಜಿಲ್ಲೆಯಲ್ಲಿ ಜನವರಿ–2026ರ ಮಾಹೆಯಲ್ಲಿ ಜರುಗುವ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ 2026ರ ಕಾರ್ಯಕ್ರಮದಲ್ಲಿ ವಿವಿಧ ಕ್ರೀಡೆಗಳನ್ನು ಆಯೋಜಿಸಲಾಗಿದೆ.

ಜನವರಿ 25ರ ಬೆಳಗ್ಗೆ 6 ಗಂಟೆಗೆ ಮ್ಯಾರಥಾನ್ ಓಟವನ್ನು ಹಮ್ಮಿಕೊಳ್ಳಲಾಗಿದ್ದು, ಓಟವು ನಗರದ ಜಿಲ್ಲಾ ಕ್ರೀಡಾಂಗಣದಿಂದ ಆರ್.ಟಿ.ಓ ಸರ್ಕಲ್, ಮಹಾವೀರ್ ಸರ್ಕಲ್ ಮಾರ್ಗವಾಗಿ ಜಿಲ್ಲಾ ಕ್ರೀಡಾಂಗಣಕ್ಕೆ ಬಂದು ಸೇರಲಿದೆ. ಪ್ರಥಮ ಬಹುಮಾನ 15 ಸಾವಿರ, ದ್ವಿತೀಯ ಬಹುಮಾನ 10 ಸಾವಿರ ಹಾಗೂ ತೃತೀಯ ಬಹುಮಾನ 5ಸಾವಿರ ರೂ.ಗಳನ್ನು ನೀಡಲಾಗುವುದು. ಆಸಕ್ತರು ಈ ಸ್ಪರ್ಧೆಯ ನೋಡಲ್ ಅಧಿಕಾರಿಗಳಾದ ಯುವಜನಾ ಸೇವಾ ಮತ್ತು ಕ್ರೀಡಾ ಇಲಾಖೆಯ ಚಂದ್ರಶೇಖರ ಹೊಸೂರು ಅವರ ಮೊಬೈಲ್ ಸಂಖ್ಯೆ: 9886551244 ಅಥವಾ ಅಥ್ಲಿಟಿಕ್ ಅಸೋಸಿಯೇಷನ್ ಕಾರ್ಯದರ್ಶಿ ತಿಮ್ಮಾರೆಡ್ಡಿ ಅವರ ಮೊಬೈಲ್ ಸಂಖ್ಯೆ: 9844484481ಗೆ ಸಂಪರ್ಕಿಸಿ ಹೆಸರು ನೋಂದಾಯಿಸಬಹುದಾಗಿದೆ.

ಈ ಕ್ರೀಡೆಗಳಲ್ಲಿ ಆಸಕ್ತರು ಭಾಗವಹಿಸಿ ರಾಯಚೂರು ಜಿಲ್ಲೆ ಹೆಮ್ಮೆಪಡುವಂತಹ ಕ್ರೀಡೋತ್ಸವ ಮೂಡಿಬರಲು ಸಹಕರಿಸಿ ರಾಯಚೂರು ಉತ್ಸವವನ್ನು ಯಶಸ್ವಿಗೊಳಿಸಲು ಎಲ್ಲಾ ಕ್ರೀಡಾಪಟುಗಳು ಮತ್ತು ಸಾರ್ವಜನಿಕರಲ್ಲಿ ವಿನಂತಿಸಿದೆ ಎಂದು ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಯಚೂರು ಉತ್ಸವ: ಜನವರಿ 27ರಂದು ಸೈಕ್ಲಾಥಾನ್

**ರಾಯಚೂರು ಜ,13–** : ರಾಯಚೂರು ಜಿಲ್ಲೆಯಲ್ಲಿ ಜನವರಿ–2026ರ ಮಾಹೆಯಲ್ಲಿ ಜರುಗುವ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ 2026ರ ಕಾರ್ಯಕ್ರಮದಲ್ಲಿ ವಿವಿಧ ಕ್ರೀಡೆಗಳನ್ನು ಆಯೋಜಿಸಲಾಗಿದೆ.

ಜನವರಿ 27ರ ಬೆಳಗ್ಗೆ 6 ಗಂಟೆಗೆ ಸೈಕ್ಲಾಥಾನ್ ಆಯೋಜನೆ ಮಾಡಲಾಗಿದೆ. ಪ್ರಥಮ ಬಹುಮಾನ 10 ಸಾವಿರ ಹಾಗೂ ದ್ವಿತೀಯ ಬಹುಮಾನ 5ಸಾವಿರ ರೂ.ಗಳನ್ನು ನೀಡಲಾಗುವುದು. ಆಸಕ್ತರು ಈ ಸ್ಪರ್ಧೆಯ ನೋಡಲ್ ಅಧಿಕಾರಿಗಳಾದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು ಅವರ ಮೊಬೈಲ್ ಸಂಖ್ಯೆ: 9972316895 ಅಥವಾ ಜಿಲ್ಲಾ ಶಸ್ತ್ರ ಚಿಕಿತ್ಸಕರಾದ ಡಾ.ವಿಜಯಶಂಕರ್ ಮೊಬೈಲ್ ಸಂಖ್ಯೆ: 9448427601ಗೆ ಸಂಪರ್ಕಿಸಿ ಹೆಸರು ನೋಂದಾಯಿಸಬಹುದಾಗಿದೆ.

ಕ್ರೀಡೆಗಳಲ್ಲಿ ಆಸಕ್ತರು ಭಾಗವಹಿಸಿ ರಾಯಚೂರು ಜಿಲ್ಲೆ ಹೆಮ್ಮೆಪಡುವಂತಹ ಕ್ರೀಡೋತ್ಸವ ಮೂಡಿಬರಲು ಸಹಕರಿಸಿ ರಾಯಚೂರು ಉತ್ಸವವನ್ನು ಯಶಸ್ವಿಗೊಳಿಸಲು ಎಲ್ಲಾ ಕ್ರೀಡಾಪಟುಗಳು ಮತ್ತು ಸಾರ್ವಜನಿಕರಲ್ಲಿ ವಿನಂತಿಸಿದೆ ಎಂದು ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಂದಲಿ ಶ್ರೀ ಮಾರುತೇಶ್ವರ ಮಹಿಮೆ ಚಲನಚಿತ್ರ KSN ಅವರಿಂದ ಅದ್ದೂರಿ ಬಿಡುಗಡೆ

ಯುವಮಾರ್ಗ ಸುದ್ದಿ



**ಅರಕೆರ,ಜ.13–**ತಾಲೂಕಿನ ಪುಣ್ಯಕ್ಷೇತ್ರವಾದ ವಂದಲಿ ಗ್ರಾಮದ ಶ್ರೀ ಮಾರುತೇಶ್ವರ ದೇವಸ್ಥಾನದ ಆವರಣದಲ್ಲಿ ಭಕ್ತಿ ಪ್ರಧಾನ ಚಲನಚಿತ್ರ " *ವಂದಲಿ ಶ್ರೀ ಮಾರುತೇಶ್ವರ ಮಹಿಮೆ" ಬಿಡುಗಡೆ ಸಮಾರಂಭವು ಅತ್ಯಂತ ಸಂಭ್ರಮದಿಂದ ಜರುಗಿತು.

ಈ ಕಾರ್ಯಕ್ರಮದಲ್ಲಿ ದೇವದುರ್ಗ ತಾಲೂಕಿನ ಜನಪ್ರಿಯ ನಾಯಕರು ಹಾಗೂ ಮಾಜಿ ಸಚಿವರಾದ ಕೆ.ಶಿವನಗೌಡ ನಾಯಕ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಚಲನಚಿತ್ರವನ್ನು ಲೋಕಾರ್ಪಣೆಗೊಳಿಸಿದರು.ಈ ಸಂದರ್ಭದಲ್ಲಿ ಮಾತನಾಡಿದ ಅವರ ನಮ್ಮ ಮಣ್ಣಿನ ಭಕ್ತಿ ಮತ್ತು ಸಂಸ್ಕೃತಿಯನ್ನು ಬಿಂಬಿಸುವ ಇಂತಹ ಪ್ರಯತ್ನಗಳು ಶ್ಲಾಘನೀಯ.ಶ್ರೀ ಮಾರುತೇಶ್ವರನ ಮಹಿಮೆಯನ್ನು ಸಾರುವ ಈ ಚಿತ್ರವು ಯಶಸ್ವಿಯಾಗಲಿ,ಈ ಚಿತ್ರಕ್ಕಾಗಿ ಶ್ರಮಿಸಿದ ಸಂಪೂರ್ಣ ಚಿತ್ರತಂಡಕ್ಕೆ ಆ ದೇವರು ಹೆಚ್ಚಿನ ಶಕ್ತಿ ನೀಡಲಿ," ಎಂದು ಹೃದಯಪೂರ್ವಕವಾಗಿ ಹಾರೈಸಿದರು,ಈ ಸಂದರ್ಭದಲ್ಲಿ ಜಾಲಹಳ್ಳಿ ಮಠದ ಶ್ರೀಗಳು ವೀರಘೋಟ ಶ್ರೀಗಳು ನವಲಕಲ್ ಶ್ರೀಗಳು ಮುಂಡರಿಗಿ ಶ್ರೀಗಳು ಹಾಗೂ ಶ್ರೀ ಬಸವರಾಜ ಅನ್ವಾರಿ ಮಾಜಿ ಕೇಂದ್ರ ಸಚಿವರು, ಶ್ರೀ ರಾಜಶೇಖರ ನಾಯಕ ಅರಕೇರ, ಶ್ರೀ ಜಂಬಣ್ಣ ನಿಲಗಲ್ ಬಿಜೆಪಿ ಪ್ರಧಾನ ಕಾರ್ಯದರ್ಶಿ ರಾಯಚೂರು ಶ್ರೀ ಬಸಣ್ಣ ನಾಯಕ ರಾಮುಲು ಬಿಜೆಪಿ ಎಸ್ ಟಿ ಮೋರ್ಚಾ ಅಧ್ಯಕ್ಷರು ಹಾಗೂ ಶ್ರೀ ಯಮನೂರಪ್ಪ ನಾಯಕ ಗ್ರಾಂ ಪಂ ಉಪಾಧ್ಯಕ್ಷರು ಶ್ರೀ ಮಹೇಶ ನಾಯಕ ಅಧ್ಯಕ್ಷರು ಗ್ರಾಮ ಪಂಚಾಯತ್ ಆಲ್ಕೋಡ ಶ್ರೀ ಶಿವರಾಜ ನಾಯಕ ಕಮಲದಿನ್ನಿ ಶ್ರೀ ಅಮರೇಶ ಗ್ರಾಂ ಪಂ ಅಧ್ಯಕ್ಷರು ಪಲಕನಮರಡಿ ಶ್ರೀ ಶಿವಪ್ಪ ಕಕ್ಕಲದೊಡ್ಡಿ ಶ್ರೀ ಆಂಜನೇಯ ದಳವಾಯಿ ಶ್ರೀ ಕೊಳ್ಳಪ್ಪ ದೇಸಾಯಿ ಶ್ರೀ ವೆಂಕಣ್ಣನಗೌಡ ಕಕ್ಕಲದೊಡ್ಡಿ ಶ್ರೀ ಸಿದ್ದಣ್ಣ ಕಾವಲಿ ಶ್ರೀ ಬಸವರಾಜ ಕರಿಓಣಿ ಬಿ ಆರ್ ಗುಂಡ ಶ್ರೀ ನರಸಣ್ಣ ನಾಯಕ ಗಾಣದಾಳ ಶ್ರೀ ಮಲ್ಲಿಕಾರ್ಜುನ ಗಾಣದಾಳ ಗ್ರಾಂ ಪಂ ಅಧ್ಯಕ್ಷರು ಶ್ರೀ ಮಲ್ಲೇಶ ದೇವರಗುಡ್ಡ ಮತ್ತು ಇನ್ನಿತರ ಮುಖಂಡರು ಮತ್ತು ಗ್ರಾಮದ ಪ್ರಮುಖರು, ಭಕ್ತಾದಿಗಳು ಪಾಲ್ಗೊಂಡಿದ್ದರು.

# ಜನವರಿ 16ರಂದು ಮಾಡಿವಾಳ ಮಾಚಿದೇವ ಜಯಂತಿ ಪೂರ್ವಭಾವಿ ಸಭೆ

**ರಾಯಚೂರು ಜ,13–** ಜಿಲ್ಲಾಡಳಿತದ ವತಿಯಿಂದ ಫೆಬ್ರವರಿ 1ರಂದು ಮಾಡಿವಾಳ ಮಾಚಿದೇವ ಜಯಂತಿ ನಡೆಯಲಿದ್ದು, ಈ ಜಯಂತಿ ಅಂಗವಾಗಿ ಜನವರಿ 16ರ ಮಧ್ಯಾಹ್ನ 3.30ಗಂಟೆಗೆ ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ಹಮ್ಮಿಕೊಳ್ಳಲಾಗಿದ್ದು, ಸಮಾಜದ ಮುಖಂಡರು, ಸಂಬಂಧಿಸಿದ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿ ಸೂಕ್ತ ಸಲಹೆ ಸೂಚನೆ ನೀಡಿ ಸಭೆಯನ್ನು ಯಶಸ್ವಿಗೊಳಿಸಬೇಕೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಯಚೂರು ಜಿಲ್ಲಾ ಉತ್ಸವ–2026ಕ್ಕೆ ಕವಿತೆ ಕಳುಹಿಸಲು ಜನವರಿ 14 ಕೊನೆಯ ದಿನ

**ರಾಯಚೂರು ಜ,13–** 2026ರ ಜನವರಿ 29, 30 ಮತ್ತು 31ರಂದು ರಾಯಚೂರಿನಲ್ಲಿ ಜಿಲ್ಲಾಡಳಿತದಿಂದ ನಡೆಯಲಿರುವ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ–2026ರ ನಿಮಿತ್ತ ಕವಿಗೋಷ್ಠಿ ನಡೆಸಲು ರಾಯಚೂರು ಜಿಲ್ಲಾಡಳಿತವು ರಾಯಚೂರು ಜಿಲ್ಲಾ ವ್ಯಾಪ್ತಿಯಲ್ಲಿನ ಕವಿಗಳಿಂದ ಸ್ವರಚಿತ ಕವಿತೆಗಳನ್ನು ಆಹ್ವಾನಿಸಿದ್ದು, ಕವಿತೆಗಳನ್ನು ಕಳುಹಿಸಲು ಜನವರಿ 14 ಕೊನೆಯ ದಿನವಾಗಿದೆ.

ಕವಿತೆಯು ಸ್ವತಂತ್ರ ರಚನೆಯಾಗಿರಬೇಕು. ಕವಿತೆಯನ್ನು ಒಂದು ಪುಟ ಮೀರದಂತೆ ನುಡಿ ಅಥವಾ ೦ಋಯನಿಕೋಡ್‌ನಲ್ಲಿ ಟೈಪ್ ಮಾಡಿ ವರ್ಡ್ ಫಾರ್ಮೇಟನಲ್ಲಿ ಇ–ವಿಳಾಸ ಡಿಚುಭಿಣಡಿಜುರಿಡಿ@ರಟಚುಟ.ಛಿಂಟ ಗೆ ಇ–ಮೇಲ್ ಮಾಡಬಹುದು. ಅಥವಾ ಹಿರಿಯ ಸಹಾಯಕ ನಿರ್ದೇಶಕರ ಕಚೇರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಪತ್ರಿಕಾ ಭವನದ ಮೊದಲನೇ ಮಹಡಿ, ಶ್ರೀ ಪಂಡಿತ ಸಿದ್ದರಾಮ ಜಂಬಲದಿನ್ನಿ ಜಿಲ್ಲಾ ರಂಗಮಂದಿರ ಹಿಂದುಗಡೆ, ರೈಲ್ವೆ ನಿಲ್ದಾಣದ ರಸ್ತೆ, ರಾಯಚೂರು ಜಿಲ್ಲೆ, ರಾಯಚೂರು ಇಲ್ಲಿಗೆ ಪೋಸ್ಟ್ ಮಾಡಬಹುದು. ಅಥವಾ ಮೊಬೈಲ್ ಸಂಖ್ಯೆ 9916111356 ಅಥವಾ 9008462236 ಗೆ ವಾಟ್ಸಪ್ ಮಾಡಬಹುದಾಗಿದೆ.

ಕವಿತೆಯೊಂದಿಗೆ ಕಡ್ಡಾಯವಾಗಿ ತಮ್ಮ ಹೆಸರು, ಸ್ಥಳ, ವಿದ್ಯಾರ್ಹತೆ, ದೂರವಾಣಿ ಸಂಖ್ಯೆಯ ವಿವರ, ವಿಳಾಸದ ದಾಖಲೆಗಾಗಿ ಆಧಾರ್ ಕಾರ್ಡ್ ಝರಾಕ್ಸ ಪ್ರತಿ ಮತ್ತು ವಯಸ್ಸಿನ ದಾಖಲೆಗಾಗಿ ಎಸ್ಸೆಸ್ಸೆಲ್ಸಿ ಅಂಕಪಟ್ಟಿ ಅಥವಾ ಬೇರೆ ಯಾವುದೇ ದಾಖಲೆಗಳನ್ನು ಕಳುಹಿಸಬೇಕು. ಕವಿಗಳ ಆಯ್ಕೆಯಲ್ಲಿ ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ. ಕೊನೆಯ ದಿನಾಂಕದ ನಂತರ ಬರುವ ಕವಿತೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ರಾಯಚೂರು ಜಿಲ್ಲಾ ಉತ್ಸವದ ಪುಸ್ತಕ ಪ್ರದರ್ಶನ, ವಿಚಾರ ಸಂಕಿರಣ ಹಾಗೂ ಕವಿಗೋಷ್ಠಿ ಸಮಿತಿಯ ಪ್ರಕಟಣೆ ತಿಳಿಸಿದೆ.

## ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಕ್ರೀಡಾಪಟುಗಳಿಂದ ಪ್ರೋತ್ಸಾಹಧನಕ್ಕೆ ಅರ್ಜಿ ಆಹ್ವಾನ

**ರಾಯಚೂರು ಜ,13–** ಅಂತರಾಷ್ಟ್ರೀಯ, ರಾಷ್ಟ್ರ ಮತ್ತು ರಾಜ್ಯ ಮಟ್ಟದ ತಂಡಗಳನ್ನು ಪ್ರತಿನಿಧಿಸಿ ಸರ್ಕಾರದಿಂದ ಅಂಗೀಕೃತವಾದಂತಹ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಪದಕ ವಿಜೇತರಾದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಕ್ರೀಡಾಪಟುಗಳಿಗೆ ಪ್ರೋತ್ಸಾಹ ಧನ ಸಹಾಯಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

2025–26ನೇ ಸಾಲಿನಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಪರಿಶಿಷ್ಟ ಜಾತಿ ಉಪಯೋಜನೆ ಹಾಗೂ ಪರಿಶಿಷ್ಟ ಪಂಗಡದ ಉಪ ಯೋಜನೆಯಡಿ 2024ನೇ ಕ್ಯಾಲೆಂಡರ್ ವರ್ಷದಲ್ಲಿ (ದಿನಾಂಕ:01–01–2024 ರಿಂದ 31–12–2024 ರವರೆಗೆ) ಅಂತರಾಷ್ಟ್ರೀಯ, ರಾಷ್ಟ್ರ, ರಾಜ್ಯ ಮಟ್ಟದ ಅಧಿಕೃತ ಕ್ರೀಡಾಕೂಟಗಳಲ್ಲಿ ಪದಕ ವಿಜೇತ ಕ್ರೀಡಾಪಟುಗಳಿಗೆ ಪ್ರೋತ್ಸಾಹ ಧನ ಸಹಾಯ ನೀಡುವ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಅಂತರಾಷ್ಟ್ರೀಯ ರಾಷ್ಟ್ರ, ರಾಜ್ಯ ಮಟ್ಟದ ತಂಡಗಳನ್ನು ಪ್ರತಿನಿಧಿಸಿ ಸರ್ಕಾರದಿಂದ ಅಂಗೀಕೃತವಾದಂತಹ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಪದಕ ವಿಜೇತರಾದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಕ್ರೀಡಾಪಟುಗಳಿಗೆ ಪ್ರೋತ್ಸಾಹ ಧನ ನೀಡಲು ಅರ್ಜಿಗಳನ್ನು ಅಧಿಕೃ ಜಾಲತಾಣ: ಞಣಣಥಿ:// ಜತಭುಟಿಜುಣ.ಇಚಿಡಿಟಿಚಿಣಚಿಞಚಿ.ರಠಠ.ಟಿ ನಲ್ಲಿ ಜನವರಿ 31ರೊಳಗಾಗಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ವಿವರಗಳಿಗಾಗಿ ಸಹಾಯಕ ನಿರ್ದೇಶಕರ ಕಚೇರಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ ರಾಯಚೂರು ಇವರನ್ನು ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H